# 54

# "ನಾನು ಕುರುಡನಾಗಿದ್ದೆ, ಈಗ ಕಣ್ಣು ಕಾಣುತ್ತದೆ"

## ಯೋಹಾನ 9, ಒಂದು ನಿಕಟ ನೋಟ

ಸುವಾರ್ತೆಗಳು ಲೇಕ್ಕಾಚಾರದಂತೆ, ಯೋಹಾನ 9ರಲ್ಲಿ ಒಂದು ವಿಶೇಷವಾದ ಗುಣ ಹೊಂದಿದ್ದಂಥ ವ್ಯಕ್ತಿಯ ಚರಿತ್ರೆಯನ್ನು ಕಾಣುತ್ತೆವೆ; ಅವನು ಹುಟ್ಟು ಕುರುಡನಾಗಿದ್ದನು, ಆದರೆ ಯೇಸು ಅವನನ್ನು ಗುಣಪಡಿಸಿದ್ದನು, ಯೋಹಾನನು ನೀಡಿದ ಏಳು ಸಂಕೇತಗಳಲ್ಲಿ[1] ಇದು ಆರನೆಯ ಅದ್ಬುತವಾಗಿದೆ. ಆ ಏಳು ಅದ್ಭುತಗಳು ವಿಶೇಷವಾದವುಗಳೇ, ಯೋಹಾನನು ಅವುಗಳನ್ನು "ಸಂಕೇತಗಳು" ಎಂದು ಕರೆದಿರುವನು, ಯಾಕೆಂದರೆ ಅವುಗಳಲ್ಲಿ ಯೇಸುವಿನ ದೈವತ್ವವನ್ನು ಕಾಣುತ್ತೇವೆ (ಯೋಹಾನ 20:30, 31) ಹಾಗು ಅವುಗಳು ಪ್ರಮುಖವಾದ ಕೆಲವು ಸತ್ಯಗಳನ್ನು ಸಹ ಬಹಿರಂಗಪಡಿಸುತ್ತೇವೆ. ಈ ಅದ್ಭುತದಲ್ಲಿಯೂ ಇವುಗಳನ್ನು ಗಮನಿಸುತ್ತೇವೆ "ಯೇಸು ಲೋಕಕ್ಕೆ ಬೆಳಕು" ಎಂಬ ಸತ್ಯಾಂಶವನ್ನು ಇದರಲ್ಲಿ ಕಾಣುತ್ತೇವೆ (ಯೋಹಾನ 9:5)

ಈ ಕಥೆಯು ಸಾರಾಂಶದಲ್ಲಿ ಒಬ್ಬ ಕುರುಡನು ಕಣ್ಣುಪಡೆದು, ಕತ್ತಲಿನಿಂದ ಬೆಳಕಿಗೆ ಬಂದ ಪ್ರಸಂಗವನ್ನು ಕಾಣಬಹುದಾಗಿದೆ - ದೈಹಿಕ ವಿಚಾರದಿಂದ ಅತ್ಮೀಕ ವಿಚಾರದೆಡೆಗೆ ಬಂದಂಥ ಕಾರ್ಯ.

### ಒಬ್ಬ ಕುರುಡ (ವಚನಗಳು 1-38)

ಯೇಸು ಹಾದು ಹೋಗುತ್ತಿರುವಾಗ[2] "ಒಬ್ಬ ಹುಟ್ಟು ಕುರುಡನನ್ನು ಕಂಡನು" (ವಚನ 1) ವಚನ 8ರಲ್ಲಿ ಅ ಕುರುಡನು ಭಿಕ್ಷುಕನಾಗಿದ್ದನು ಎಂದು ಬರೆದಿದೆ ಅಂದನ ಕುರುಡರಲ್ಲಿ ಭಿಕ್ಷೆ ಬೇಡುವದೇ ಪ್ರಮುಖ ವೃತ್ತಿಯಾಗಿತ್ತು (ನೋಡಿ ಮಾರ್ಕ 10:46).

**ಗೊಂದಲದ ಪರಿಹಾರ (ವಚನಗಳು 2-4)**

ಅಪೋಸಲರು ಈ ವ್ಯಕ್ತಿಯನ್ನು ಕಂಡಾಗ, ಅವನಲ್ಲಿದ್ದ ಗೊಂದಲವನ್ನು ಪರಿಹಾರ ಮಾಡಲು ಯತ್ನಿಸಿದರು ಅವರ ಬೋಧಕನು "ಪಾಪವಿಲ್ಲದ ಮರಣವಿಲ್ಲ, ತಪ್ಪು ಇಲ್ಲದೆ, ಬಾಧೆಗಳಿಲ್ಲ"[3] ಎಂದು ಹೇಳಿದ್ದ ಹೇಳಿಕೆಯನ್ನು ತಮ್ಮ ಚಿಕ್ಕವಯಸ್ಸಿನಿಂದಲೂ ಕಳ್ಳೆದ್ದರು. ಈ ಮನುಷ್ಯನು ಕುರುಡನಾದ್ದರಿಂದ ಈ ಎಲ್ಲಾ ಗೊಂದಲಗಳು ಅವನಲ್ಲಿದ್ದವು ಎಂಬ ಭಾವನೆ ಅವರಿಗೆ ಉಂಟಾಗಿತ್ತು. ಅದ್ದರಿಂದ ಅವರು; "ಗುರುವೇ,[4] ಇವನು ಕುರುಡನಾಗಿ ಹುಟ್ಟಿರುವದಕ್ಕೆ ಯಾರು ಪಾಪ ಮಾಡಿದರು?" ಇವನ ತಂದೆ ತಾಯಂದಿರೋ ಎಂದು ಕೇಳಿದರು? (ವಚನ 2). ಅವನು ಕುರುಡನಾಗಿ ಹುಟ್ಟಿದ್ದನು ಎಂಬ ಅಂಶ ಅವರಿಗೆ ಹೇಗೆ ತಿಳಿಯತ್ತು, ಒಂದು ವೇಳೆ ಯೇಸು ತಿಳಿಸಿರ ಬಹುದು, ಅಥವ ಸಮಿಪದಲ್ಲಿದ್ದವನ್ನು ಹೇಳಿರಬಹುದು

ಅವರು ಕೇಳಿದ ಪ್ರಶ್ನೆಗಳಲ್ಲಿ ಒಂದು ಅಂಶ ಸರಿ ಇರಲಿಲ್ಲ; ಅವನು ಪಾಪಮಾಡಿದ ನಿಮಿತ್ತ ಈ ರೀತಿ ಹುಟ್ಟಿದನು? ಅವನು ಹುಟ್ಟುವ ಮೊದಲೇ ಪಾಪ ಮಾಡಲು ಹೇಗೆ ಸಾಧ್ಯ?[5] ಅವರ ಪ್ರಶ್ನೆಯಲ್ಲಿ, ತೀರ್ಪು ಮಾಡವ ಮತ್ತುಂದು ಅಂಶವು ಅಡಕವಾಗಿತ್ತು, ಅವನ ತಂದೆ, ತಾಯಿಗಳು ಪಾಪ ಮಾಡಿದ್ದರಿಂದ ಕುರುಡನಾಗಿ ಹುಟ್ಟಿದನೇ? ಕೆಲವು ಪಾಪಗಳ ನಿಮಿತ್ತ ಗರ್ಭದಲ್ಲಿರುವ ಶಿಶುವು ತೊಂದರೆಗೆ ಒಳಗಾಗಬಹುದು,[6] ಅ ಪಾಪಗಳನ್ನು ತಂದೆ ತಾಯಿಗಳು ಮಾಡಿದ್ದರು ಎಂಬದು ಶಿಷ್ಯರಿಗೆ ಯೋಗ್ಯವಾದ ಕಾರ್ಯವಾಗಿರಲಿಲ್ಲ.

ಯೇಸು ಉತ್ತರಿಸಿ, "ಇವನಾಗಲೀ ಅಥವ ಇವನ ತಂದೆ ತಾಯಿಗಳು ಇದಕ್ಕೆ ಕಾರಣರಲ್ಲ ಎಂದನು"[7] (ವಚನ 3ಎ), ಪಾಪದಿಂದ ಭಾಧೆಯಾಗಬಹುದು, ಆದರೆ ಸಕಲ ವಿಧವಾದ ಭಾಧೆಗಳಿಗೆ ಪಾಪವು ಮೂಲವಾಗಿರುವದಿಲ್ಲ,[8] "ದೇವರ ಕ್ರಿಯೆಗಳು ಇವನಲ್ಲಿ ತೂರಿ ಬರುವದಕ್ಕೆ ಇದು ಉಂಟಾಯಿತು ಎಂದು ಯೇಸು ಉತ್ತರವನ್ನು ಮುಂದುವರೆಸಿದನು" (ವಚನ 3ಬಿ). ಅಂದರೆ ದೇವರು ಅವನನ್ನು ಕುರುಡನಾಗಿ ಉಂಟುಮಾಡಿದ ನಂತರ ಆತನ ಮಗನು ಬಂದು ವಾಸಿಮಾಡುವನು ಎಂಬ ಅರ್ಥವಲ್ಲ, ಪ್ರತಿಯೊಂದು ಕಷ್ಟಗಳ ಮೂಲಕ ವಿಶೇಷವಾದ ಅವಕಾಶಗಳು ಬರುತ್ತೇವೆ; ದೇವರ ಕೃಪ ಕಟಾಕ್ಷವನ್ನು ಪ್ರಚುರ ಮಾಡಲು, ಇತರರಿಗೆ ಸಹಾಯ ಮಾಡುವ ನಂಬಿಕೆಯ ಬಲ ಪ್ರಯೋಗವನ್ನು ತೋರುವ ತಂದೆಯ ಬಳಿಗೆ[9] ಹೋಗುವ ಅವಕಾಶವು ಇದಾಗಿದೆ ಕಷ್ಟಗಳು ಬರುವಾಗ ನಾವುಗಳು "ನನಗೇಕೆ ಇವುಗಳು ಬಂದವು?" ಎಂದು ಪ್ರಶ್ನೆಸುತ್ತೇವೆ. "ಇದರಿಂದ ದೇವರ ಕ್ರಿಯೆಗಳನ್ನು ನಾನು ಹೇಗೆ ಪ್ರಚಾರ ಪಡಿಸಲಿ?" ಎಂಬ ಪ್ರಶ್ನೆಯು ನಮ್ಮದಾಗಿರಬೇಕು.

ಅದರಂತೆ ಯೇಸು, "ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡೆಸಬೇಕು"; "ರಾತ್ರಿ" ಬರುತ್ತದೆ ಅದು ಬಂದ ಮೇಲೆ ಯಾರು ಕೆಲಸ ಮಾಡಲಾರರು (ವಚನ 4) ಅಂದನು. ದೇವರ ಕಾರ್ಯಗಳನ್ನು ತುರ್ತಾಗಿ ಪ್ರಚುರಪಡಿಸಲು ಈ ಕುರುಡನು ಒಂದು ಮೂಲವಾದನು ಎಂದು ಶಿಷ್ಯರು ತಿಳಿಯಬೇಕಿತ್ತು ಮರಣದ ರಾತ್ರಿ ಯೇಸುವನ್ನು ಸಮೀಪಿಸುತ್ತಿತ್ತು, ಇದರಲ್ಲಿ ನಾವುಗಳು ಸಹ ಸೇರಿದ್ದೇವೆ,[10] ಆದ್ದರಿಂದ ಕೆಲಸ ಮಾಡುವಂಥ ಸಮಯದಲ್ಲಿ ಕೆಲಸಮಾಡೋಣ.

**ಸ್ವಸ್ಥತೆಯ ಅಗತ್ಯವಿದ್ದ ಒಬ್ಬವ್ಯಕ್ತಿ (ವಚನಗಳು 5-7, 14)**

"ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ" ಎಂದು ಯೇಸು ಹೇಳಿದ್ದನು (ವಚನ 5). ಅಂದರೆ, "ನಾನು ಈ ಲೋಕದಲ್ಲಿ ಇರುವವರೆಗೂ ಈ ಕುರುಡನಿಗೂ ಮತ್ತು ಇತರೆ ಜನರಿಗೂ ಬೆಳಕನ್ನು ತರುವವನಾಗಿದ್ದೇನೆ" ಎಂಬ ಅರ್ಥವಾಗಿದೆ, ಈ ಕುರುಡನಲ್ಲಿ ದೈವಶಾಸ್ತ್ರಕ್ಕೆ ಸಂಬಂಧ ಪಟ್ಟ ಗೊಂದಲವು ನಿವಾರಣೆಯಾಗಬೇಕು ಎಂಬ ಅಂಶವನ್ನು ಶಿಷ್ಯರು ಮನಗೊಂಡಿದ್ದರು, ಆದರೆ ಅವನಲ್ಲಿದ್ದ ಒಂದು ಸಮಸ್ಯೆಯು ಪರಿಹಾರವಾಗಬೇಕಿದೆ ಎಂದು ಯೇಸು ತಿಳಿದನು, "ನಾನೇ ಲೋಕಕ್ಕೆ ಬೆಳಕು, ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದ ಜೀವ ಕೂಡುವ ಬೆಳಕನ್ನು ಹೊಂದಿದವನಾಗಿರುವನು" (8:12) ಎಂದು ಹೇಳಿದ ಸ್ವಲ್ಪ ಸಮಯದ ನಂತರದಲ್ಲಿ, "ಅದನ್ನು ನೇರವೇರಿಸಲು ಆತನು ಮುಂದಾದನು, ನಂತರ ಆತನು ನೆಲದ ಮೇಲೆ ಉಗುಳಿ ಅ ಉಗುಳಿನಿಂದ ಮಾಡಿದ ಕೆಸರನ್ನು ಅವನ ಕಣ್ಣುಗಳಿಗೆ ಹಚ್ಚಿದನು" (ವಚನ 6). ವಿವರಣೆಕಾರರು ಈ ವಿಚಾರದಲ್ಲಿ ಪ್ರಶ್ನೆಯನ್ನು ಹೊಂದಿದ್ದರು, ನಮಗೆ ಇದರ ಕಾರಣ ತಿಳಿದಿರುವದಿಲ್ಲ.[11] ಅತನು ಇದನ್ನು ಮಾಡಲು ಇಚ್ಚಿಸಿದನು ಎಂಬದು ಸರಳ ಉತ್ತರವಾಗಿದೆ.

ಕೆಸರನ್ನು ಹಚ್ಚಿಸಿಕೊಂಡವನಿಗೆ, "ನೀನು ಸಿಲೋಮ ಕೊಳಕ್ಕೆ ಹೋಗಿ ತೊಳೊಕೋ" ಅಂದನು (ವಚನ 7ಎ).[12] ದೇವದರ್ಶನದ ಗುಡಾರದ ಹಬ್ಬದ ಅಧ್ಯಯನದ ಸಂದರ್ಭದಲ್ಲಿ ಅದಕ್ಕೆ ಬಳಸುವ ನೀರನ್ನು ಸಿಲೋವ ಕೊಳದಿಂದ ತರುತ್ತಿದ್ದರು ಎಂದು ಗಮನಿಸುತ್ತಿದ್ದೇವೆ.[13] ಅ ಕೊಳವೆ ದಕ್ಷಿಣ ಪ್ರಾಂತದಲ್ಲಿತ್ತು[14] ಅದು ಯೆರೂಸಲೇಮನ್ನು ಗುರುತಿಸುವ ಒಂದು ಸ್ಥಳವಾಗಿತ್ತು ಅದು ಪುರಾತನ ತಂತ್ರಜ್ಞಾನದ ಒಂದು ನಿದರ್ಶನವಾಗಿತ್ತು; ಪಟ್ಟಣದ ಹೊರಭಾಗದಿಂದ, ಒಳಭಾಗಕ್ಕೆ ನೀರಿನ ಸರಭರಾಜಿಗಾಗಿ ಅರಸನಾದ ಹಿಜ್ಜಿಯನು ಸುರಂಗ ಮಾರ್ಗದ ಕಾಲುವೆಯನ್ನು ಮಾಡಿದ್ದನು (2 ಪೂರ್ವಕಾಲವೃತ್ತಾಂತ 32:2-4; ಯೆಶಾಯ 22:9-11; 2 ಅರಸು 20:20), "ಆ ಕೊಳಕ್ಕೆ ಕಳುಹಿಸಲ್ಪಟವನ್ನು ಎಂಬ ನಾಮಧೇಯ" (ಯೋಹಾನ 9:7ಬಿ), ಯಾಕೆಂದರೆ ನೇರ ಅ ಮಾರ್ಗದಿಂದ ಒಳಗೆ ಹರಿಯುತ್ತಿತ್ತು.

ಕುರುಡನ ಕುರಿತು ಗಮನ ಹರಿಸೋಣ. ಮುಂದಿನ ಕಥಾಭಾಗದಲ್ಲಿ ಕುರುಡನೆ ಪ್ರಮುಖವಾದ ಅಂಶವಾಗಿದ್ದಾನೆ, ಈಗ ನಿಮ್ಮನ್ನು ಅವನ ಸ್ಥಾನದಲ್ಲಿ ಹೋಲಿಸಿಕೊಳ್ಳಿರಿ, ಶಿಷ್ಯರ ಮಾತುಗಳಿಂದ ಅವನಿಗೆ ಏನನ್ನನಿಸಿರಬಹುದು? ಯೇಸು ನೀಡಿದ ತಣ್ಣನೆಯ ಮಣ್ಣನ್ನು ಹೊಂದಿಕೊಂಡು, ನೀನು ಹೋಗಿ ಸಿಲೋವ ಕೊಳದಲ್ಲಿ ತೊಳೆದುಕೊ, ಎಂಬ ಯೇಸುವಿನ ಮಾತಿಗೆ ಅವನ ಪ್ರತಿಕ್ರಿಯೆ ಏನಿರಬಹದು, ನೀವು ಅಲ್ಲದ್ದಿದ್ದರೆ, ನಿಮ್ಮ ಅನುಭವ ಏನಾಗಿರಬಹದು? ಅಂಥಹ ಅಪ್ಪಣೆಗೆ ನಿಮ್ಮ ಪ್ರತಿಕ್ರಿಯೆ ಏನಾಗಿರಬಹುದು? ಅವನು ಹೋಗಿ ತೊಳಕೊಂಡನು (ವಚನ 7ಸಿ).

ಆ ಕುರುಡನು ಕ್ರಿಸ್ತನಿಗೆ ಏಕೆ ವಿಧೆಯನಾದನು ಸಿಲೋವದ ಕೊಳವನ್ನು ಹೊರತು ಪಡಿಸಿ ಬೇರೆ ಕೊಳವನ್ನು ಅವನು ಬಯಸಿದ್ದನೇ ಯಾಕೆಂದರೆ ಅವನು ಸಿಲೋವ ಕೊಳದಿಂದ ಬಹು ದೂರವಿದ್ದನು[15] ಅವನಿಗೆ ದೃಷ್ಟಿ ಇಲ್ಲದವನ್ನು ಮರೆಯಬೇಡ ಕಣ್ಣಿದ್ದವರು ಅನೇಕ ವೈರಿ ಗಳನ್ನು ನಡೆಯಬಹದು, ಆದರೆ ಕುರುಡನಿಗೆ ಸಮೀಪದ ಸ್ಥಳವೂ ಸಹ ಅತಿ ಪ್ರಯಾಸಕರವಾ ಗಿತ್ತು ಅವನು ಜನರ ಗುಂಪಿನಿಂದ ಹಾದು ಯೆರುಸಲೋಮಿನ ಕಿರಿದಾದ ದಾರಿಯಲ್ಲಿ ನಡೆಯವದನ್ನು ಊಹಿಸಿರಿ? ಅದು ಪ್ರಯಾಸಕರವಾದ ಪ್ರಯಾಣವಲ್ಲವೇ ಆದರೆ ಅವನು ಏಕೆ ಯೇಸುವಿಗೆ ವಿಧೆಯನಾದನು,

ನಂತರದಲ್ಲಿ ಅವನು ತನ್ನ ನೆರೆಹೊರೆಯವರಿಗೆ: “ಯೇಸು ಎಂಬವನಿದ್ದಾನಲ್ಲಾ, ಅವನು ಕೆಸರು ಮಾಡಿ ನನ್ನ ಕಣ್ಣಿಗೆ ಹಚ್ಚಿ *ಸಿಲೋವಕ್ಕೆ ಹೋಗಿ ತೊಳಕೋ* ಅಂದನು,” ನಾನು ಹೋಗಿ ತೊಳಕೊಂಡನು; ಕಣ್ಣು ಬಂದವು ಅಂದನು (ವಚನ 11; ಒತ್ತಿ ಹೇಳಿದ್ದು ನನ್ನದು). ಒಂದು ವೇಳೆ ಅವನು ಯೇಸುವಿನ ಹಾಗೂ ಆತನು ಮಾಡಿದ ಮಹತ್ಕಾರ್ಯಗಳ ಬಗ್ಗೆ ಜನರಿಂದ ಕೇಳಿರಬಹುದು (ನೋಡಿ 7:31). ಯೇಸುವಿನ ಕುರಿತಾಗಿ ಅವನು ಅಲ್ಪವಾಗಿ ಮಾತ್ರ ಅರಿತ್ತಿದ್ದನು (ವಚನಗಳು 9:17, 36). ಆದರೆ ಯೇಸು ಹೇಳಿದ “ಹೋಗು ತೊಳಕೋ” ಎಂಬ ಮಾತಿನಿಂದ ಅವನು ಪುಳಕಿತನಾಗಿದ್ದನು, ಮತ್ತು ನಾನು “ಇದನ್ನು ಮಾಡಲೇಬೇಕು!” ಎಂಬ ನಿರ್ಣಯವನ್ನು ಹೊಂದಿದನು.

“ಅವನು ಹೋಗಿ ತೊಳಕೊಂಡನು; ಕಣ್ಣು ಹೊಂದಿದವನಾಗಿ ಹಿಂದಿರುಗಿದನು” (ವಚನ 7ಸಿ, ಡಿ). ಕಣ್ಣು ಹೊಂದಿದವನಾಗಿ ಬಂದದ್ದು, ಆಶ್ಚರ್ಯವಲ್ಲವೇ! ಯಾಕೆಂದರೆ ಅವನು ಈ ಹಿಂದೆ ಏನನ್ನೂ ನೋಡದವನಾಗಿದ್ದನು. ಅವನು ಬಣ್ಣಗಳ ಬಗ್ಗೆ ವಿವರಣೆಗಳನ್ನು ಹೊಂದಿ, ಅದರ ಆಕಾರಗಳನ್ನು ಮುಟ್ಟಿ ಅರಿತ್ತಿದ್ದನಷ್ಟೆ, ಆದರೆ ಅವುಗಳ ನಿಜ ಸ್ವರೂಪವನ್ನು ಮಾತ್ರ ಅರಿತಿರಲಿಲ್ಲ.

ಈ ಚಿತ್ರಣವನ್ನು ನಿಮ್ಮ ಮುಂದೆ ಇಟ್ಟುಕೊಳ್ಳಿರಿ. ಅವನು ಮುಗ್ಗರಿಸಿ ನಡೆದು ಸಿಲೋವ ಕೊಳವನ್ನು ತಲುಪಿದ್ದನು, ಅವನು ನೀರಿನಲ್ಲಿಳಿದು ಬೊಗಸೆಯಿಂದ ನೀರನ್ನು ತೆಗೆದು ಕೆಸರಿನ ತನ್ನ ಕಣ್ಣುಗಳಿಗೆ ಸ್ಪರ್ಷಿಸಿಕೊಂಡನು. ನಂತರ ಅವನು ತನ್ನ ಕೈಗಳನ್ನು ನೀರನ್ನು, ನೋಡಿ ದನು ತಲೆಯನ್ನು ಎತ್ತಿ ಜನ ಜಂಗುಳಿಯನ್ನು ನೋಡಿದನು! ಅವನು ಮೇಲೆ ನೋಡಲು, ಆಕಾಶವನ್ನೂ, ಪಕ್ಷಿಗಳನ್ನೂ ನೋಡಿದನು. ಅವನ ಆನಂದವನ್ನು ಊಹಿಸಿರಿ! “ಆತನು ನೋಡುವವನಾಗಿ ಹಿಂದಿರುಗಿದನು”[16] ಎಂಬ ಹೇಳಿಕೆಯಲ್ಲಿ ಸಕಲ ವಿಚಾರಗಳು ಅಡಕವಾ ಗಿವೆ!

ವಚನ 14ರ ಪ್ರಚಾರ, “ಯೇಸು ಕೆಸರು ಮಾಡಿ ಅವನಿಗೆ ಕಣ್ಣು ಕೊಟ್ಟ ದಿನವು *ಸಬ್ಬತ್* ದಿವಸವಾಗಿತ್ತು” (ಒತ್ತಿ ಹೇಳಿದ್ದು ನನ್ನದು). ಈ ಹಿಂದೆಯು ಸಹ ಸಬ್ಬತ್ ದಿನದಲ್ಲಿ ಯೇಸು ಮತ್ತೊಬ್ಬನನ್ನು ವಾಸಿಮಾಡಿದ್ದನು, ಇದರ ನಿಮಿತ್ತವೂ ಯೇಸುವಿಗೆ ಸಮಸ್ಯೆ ಉಂಟಾಗಿತ್ತು!

### ಒಂದು ಸಮಸ್ಯೆಯು ಪರಿಹಾರ (ವಚನಗಳು 8-14)

ಅವನು ದೃಷ್ಟಿಯನ್ನು ಹೊಂದಿದ ನಂತರ, ಎಲ್ಲಿಗೆ ಹೋಗಬೇಕಿತ್ತು? ಯೇಸು ಇದ್ದ

ಸ್ಥಳವನ್ನು ಅವನು ಅರಿತಿರಲಿಲ್ಲ (ವಚನಗಳು 1, 12). ಅವನು ಭಿಕ್ಷೆ ಬೇಡುತ್ತಿದ್ದ ಸ್ಥಳಕ್ಕೆ ಹೋಗುವದು ಸಮಂಜಸವಾಗಿರಲಿಲ್ಲ - ಆದ್ದರಿಂದ ಅವನು ತನ್ನ ಮನೆಗೆ ಹಿಂದಿರುಗಿದನು.

ಅವನ ನೆರೆಹೊರೆಯವರು ಅವನನ್ನು ನೋಡಿದಾಗ, ಸಂದೇಹಪಟ್ಟರು. ಅವನು ಅವನ ಹಾಗೆ ಇದ್ದರು. ಕುರುಡರು ನಡೆಯುವಂತೆ, ಮುಗ್ಗರಿಸಿ ನಡೆಯಲಿಲ್ಲ. ಅವನ ಕಣ್ಣುಗಳು ತೆರೆಯಲ್ಪಟ್ಟಿದ್ದವು. ಅವನ ಚಲನವಲನಗಳು ಆಶ್ಚರ್ಯದಿಂದ ಇದ್ದವು. ಅವನನ್ನು ಅರಿತಿದ್ದವರು ಅವನನ್ನು ಗುರುತಿಸಿದರೆ, ಇತರರು ಅವನನ್ನು ಗುರುತಿಸಲಿಲ್ಲ (ವಚನ 9ಎ). ಅವರು ಇವನ ಕುರಿತಾಗಿ ಚರ್ಚಿಸುತ್ತಿರುವಾಗ, “ನಾನೇ ಅವನು ಅಂದನು” (ವಚನ 9ಬಿ). ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ, ತನ್ನ ಕಥೆಯನ್ನು ಪುನರಾವರ್ತನೆ ಮಾಡಿದನು.

> ಆಗ ಅವರು - ನಿನಗೆ ಕಣ್ಣು ಹೇಗೆ ಬಂದವು? ಎಂದು ಅವನನ್ನು ಕೇಳಿದ್ದಕ್ಕೆ ಇವನು - ಯೇಸು ಎಂಬವನಿದ್ದಾನಲ್ಲಾ, ಅವನು ಕೆಸರು ಮಾಡಿ ನನ್ನ ಕಣ್ಣಿಗೆ ಹಚ್ಚಿ ಸಿಲೋವ ಕೊಳಕ್ಕೆ ಹೋಗಿ ತೊಳಕೋ ಎಂದು ಹೇಳಿದನು; ನಾನು ಹೋಗಿ ತೊಳಕೊಂಡೆನು; ಕಣ್ಣು ಬಂದವು ಅಂದನು. ಅವರು - ಅವನೆಲ್ಲಿದ್ದಾನೆ ಎಂದು ಅವನನ್ನು ಕೇಳಿದ್ದಕ್ಕೆ ಅವನು - ನನಗೆ ಗೊತ್ತಿಲ್ಲ ಅಂದನು (ವಚನಗಳು 10-12).

ಗೊಂದಲದಲ್ಲಿದ್ದ ಈ ಮನುಷ್ಯನಿಗೆ ಪರಿಹಾರವಾಗಬೇಕು ಎಂದು ಶಿಷ್ಯರು ಗ್ರಹಿಸಿದ್ದರು, ಈಗ ನೆರೆಹೊರೆಯವರು ಅವನ ಗೊಂದಲವನ್ನು ಪರಿಹರಿಸಬೇಕಾಯಿತು. ಸತ್ಯವಾದ ಅದ್ಭುತವು ಅವರನ್ನು ಮೂರ್ಖರನ್ನಾಗಿ ಮಾಡಿತ್ತು. ಇದರಿಂದ ಅವರೆಲ್ಲರೂ ಗಲಿಬಿಲಿಗೊಂಡಿದ್ದರು (ನೋಡಿ ವಚನಗಳು 16, 22) ಅದ್ಭುತವು ಸಬ್ಬತ್ ದಿನದಲ್ಲಿ ಆಗಿದ್ದರಿಂದ, ಅವರಿಗೆ ಹೆಚ್ಚಿನ ಗೊಂದಲವಾಯಿತು (ವಚನ 14) ಅದನ್ನು ಅವರು ಗ್ರಹಿಸಲಾರದೆ ಹೋದರು. ಮುಂಚೆ ಕುರುಡನಾಗಿದ್ದ ಇವನನ್ನು ಫರಿಸಾಯರ ಬಳಿಗೆ ಕರಕೊಂಡು ಹೋದರು (ವಚನ 13).[17]

**ಅಹಿತವನ್ನು ಕಡಿಮೆ ಮಾಡಿದ್ದು (ವಚನಗಳು 15-17, 22)**

ಫರಿಸಾಯರು ಅವನನ್ನು ವಿಚಾರಿಸಿದಾಗ, ತನ್ನ ಕಥೆಯನ್ನು ಪುನಃ ವಿವರಿಸಿದನು (ವಚನ 15). ಆ ಚರ್ಚೆಯ ಸಮಯದಲ್ಲಿ ಫರಿಸಾಯರು ಯೇಸುವಿನ ಹೆಸರನ್ನು ಬಳಸದೇ ಹೋದರು, ಆ ಅದ್ಭುತ ಮಾಡಿದವನು ಯೇಸುವೇ ಎಂದು ಅರಿತಿದ್ದರು (ವಚನ 22). ಈ ವಿಚಾರವನ್ನು ತಿಳಿಸಿದ ತಕ್ಷಣ ಫರಿಸಾಯರು “ಈ ಮನುಷ್ಯನು[18] ದೇವರಿಂದ ಬಂದವನಲ್ಲಾ” ಅವನು ಸಬ್ಬತ್ ದಿವಸವನ್ನು ಲಕ್ಷ್ಯಮಾಡುವವನಲ್ಲಾ ಅಂದರು (ವಚನ 16ಎ).

ಈ ಹಿಂದೆಯೂ ಸಹ, ಯೇಸು ಸಬ್ಬತ್ ದಿನದಲ್ಲಿ ಒಬ್ಬನನ್ನು ವಾಸಿಮಾಡಿದಾಗ, ಯೆರೂಸಲೇಮಿನಲ್ಲಿ ಯೇಸು ವಿಚಾರಣೆಗೆ ಒಳಗಾಗಿದ್ದನು (ಯೋಹಾನ 5:1, 9, 10, 16, 18; 7:21-23). ಈಗ ಆತನು ಸ್ವಸ್ಥತೆಯ ಸಂಗಡ, ಮಣ್ಣಿನ ಕೆಸರನ್ನೂ ಮಾಡಿದ್ದನು.[19] ಅವರ ಸಂಪ್ರದಾಯದ ಪ್ರಕಾರ, ಸಬ್ಬತ್ ದಿನದಲ್ಲಿ ಯೇಸು ಕೆಲಸಮಾಡಿಂತಾಗಿತ್ತು. ಆತನು ಅನೇಕ ಬಾರಿ ಇದನ್ನು ಮಾಡಿದ್ದನು!

ಆ ಅಧಿಕಾರಿಗಳ ಪ್ರಕಾರ ಇದು ತರ್ಕಶಾಸ್ತ್ರದಲ್ಲಿನ ಮತ್ತೊಂದು ತರ್ಕವಾಗಿತ್ತು:[20]

- ಮಹಾ ಅಪರಾಧ: “ನಮ್ಮ ಸಬ್ಬತ್ತಿನ ಸಂಪ್ರದಾಯವನ್ನು ಮುರಿಯುವವನು ಒಬ್ಬ ಪಾಪಿ.”
- ಸಣ್ಣ ಅಪರಾಧ: “ಸಬ್ಬತ್ತಿನ ಸಂಪ್ರದಾಯವನ್ನು ಯೇಸು ಮುರಿದಿದ್ದನು.”
- ಮುಕ್ತಾಯ: “ಆದುದರಿಂದ ಯೇಸು ಪಾಪಿಯಾಗಿದ್ದನು.”

ತರ್ಕಶಾಸ್ತ್ರದ ಪ್ರಕಾರ, ಮಹಾ ಅಪರಾಧ ಹಾಗೂ ಸಣ್ಣ ಅಪರಾಧ ಎರಡೂ ಸಹ ನಿಜವಾದ ಸಂಗತಿಗಳೇ, ಆದ್ದರಿಂದ ಅವುಗಳ ನಿರ್ಣಯವು ನಿಜವಾದದ್ದಾಗಿದೆ. ತರ್ಕ

ಶಾಸ್ತ್ರದ ಪ್ರಕಾರವಿರುವ ಮಹಾಪರಾದವು ನಿಜವಲ್ಲ ಎಂಬುದು ಫರಿಸಾಯರ ಸಮಸ್ಯೆಯಾಗಿತ್ತು. ಯಾಕೆಂದರೆ ಅದು ದೇವರ ನೇಮಕದಂತಿರದೆ, ಮನುಷ್ಯನ ನೇಮಕದಂತಿತ್ತು (ಮತ್ತಾಯ 15:1-9).

ವಚನ 16ರ ಪ್ರಕಾರ ಅವರು ನ್ಯಾಯ ವಿಚಾರಣೆಯನ್ನು ಮಾಡುತ್ತಿದ್ದರು ಆದರೆ ಇತರರು (ಧಾರ್ಮಿಕ ಅಧಿಕಾರಿಗಳಲ್ಲ) "ಇಂಥಹ ಮಹತ್ತುಗಳನ್ನು ಮಾಡುವದು ಭಕ್ತಿಹೀನನ ಕೈಯಿಂದ ಹೇಗಾದೀತು" ಅಂದರು (ವಚನ 16ಬಿ).[21] ಅವರ ತರ್ಕಶಾಸ್ತ್ರವು ತಪ್ಪಾದದ್ದನ್ನು ಅವರು ಅರಿಯಲಿಲ್ಲ, ಅವರ ಅಂತಿಮ ನಿರ್ಣಯವು ನ್ಯಾಯಬದ್ಧವಾಗಲಿಲ್ಲ. "ಹೀಗೆ ಅವರಲ್ಲಿ ಬೇಧ ಉಂಟಾಯಿತು" (ವಚನ 16ಸಿ). ಬೇಧವು ಅಹಿತವಾಗಿತ್ತು (1 ಕೊರಿಂಥ 1:10), ಆದರೆ ಈ ಸಮಯದಲ್ಲಿ ಬೇಧವು ಒಳಿತನ್ನು ಉಂಟುಮಾಡಿತು. ಯೇಸುವಿನ ಬೋಧನೆಯು ಕಠಿಣಹೃದಯಿಗಳ ಮೇಲೆ ಪರಿಣಾಮ ಬೀರಿತ್ತು![22]

ಬಹು ಜನರಲ್ಲಿ, ಪ್ರತಿಕ್ರಿಯೆ, ಶೂನ್ಯವಾಗಿತ್ತು ಆದ್ದರಿಂದ ಗುಣ ಹೊಂದಿದ ಮನುಷ್ಯನಿಗೆ ಅವರು ನಾನಾ ವಿಧವಾದ ಪ್ರಶ್ನೆಗಳನ್ನು ಕೇಳಲು ಆರಂಭಿಸಿದರು: "ನೀನು ಅವನ ವಿಷಯವಾಗಿ ಏನು ಹೇಳುತ್ತೀ, ಅವನು ನಿನಗೆ ಕಣ್ಣು ಕೊಟ್ಟಿರುವನಲ್ಲವೇ?" ಎಂದು ಪ್ರಶ್ನಿಸಿದರು (ವಚನ 17ಎ). "ಅವನು ಪ್ರವಾದಿ ಅನ್ನುತ್ತೇನೆ"[23] ಅಂದನು (ವಚನ 17ಬಿ). ಯೇಸು ಯಾರೆಂದು ಅವನು ತಿಳಿಯದೇ ಇದ್ದರೂ ಆತನಿಂದ ಅದ್ಭುತ ಹೊಂದಿದ್ದರಿಂದ ಯೇಸು ಪ್ರವಾದಿಯಾಗಿರಬಹುದೆಂದು ನಿರ್ಣಯಿಸಿದ್ದನು.[24]

### ಬೀಳುವಂಥ ಸಂದರ್ಭವನ್ನು ತಪ್ಪಿಸಬೇಕು (ವಚನಗಳು 18-23)

ಸ್ವಸ್ಥ ಹೊಂದಿದವನು ಸುಳ್ಳು[25] ಹೇಳುತ್ತಿರಬಹುದೆಂದು, ಕೆಲವರು ತಿಳಿದು ಅವನ ತಂದೆ ತಾಯಿಗಳನ್ನು ಕರೆಕಳುಹಿಸಿದರು (ವಚನ 18). ಅವನ ತಂದೆತಾಯಿಗಳು ಒಂದು ಆ ದಿನಗಳಲ್ಲಿದ್ದ ಅಧಿಕಾರಿಗಳ ಮುಂದೆ ನಿಂತರು (ವಚನ 22). ಅವರು ಅವರಿಗೆ ಮೂರು ಪ್ರಶ್ನೆಗಳನ್ನು ಕೇಳಿದರು: (1) "ನಿಮ್ಮ ಮಗನು ಇವನೋ?"[26]; (2) "ಇವನು ಕುರುಡನಾಗಿ ಹುಟ್ಟಿದ್ದನೋ?"; (3) "ಅವನಿಗೆ ಹೇಗೆ ಕಣ್ಣುಗಳು ಬಂದವು?" (ವಚನ 19).

ತಂದೆ ತಾಯಿಗಳು ಅವರು ಕೇಳಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ನೀಡಿದರು. ಅವನ ತಂದೆ ತಾಯಿಗಳು ಯೆಹೂದ್ಯರಿಗೆ ಅಂಜದ ಕಾರಣ, ಮೂರನೆಯ ಪ್ರಶ್ನೆಗೆ ಉತ್ತರ ನೀಡಲಿಲ್ಲ. ಯಾಕಂದರೆ - ಯಾರಾದರೂ ಯೇಸುವನ್ನು ಕ್ರಿಸ್ತನೆಂದು ಒಪ್ಪಿಕೊಂಡು ಹೇಳಿದನು. ಅಂಥವನಿಗೆ ಬಹಿಷ್ಕಾರ[27] ಹಾಕಬೇಕೆಂದು ಈ ಮೊದಲೇ ನಿರ್ಧರಿಸಿದ್ದರು (ವಚನ 22). ದೇವಾಲಯದಿಂದ ಬಹಿಷ್ಕಾರ ಹಾಕುವದು. ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಸಂಗತಿಯಾಗಿತ್ತು. ಯಾವುದೇ ಒಂದು ಕಾರಣದಿಂದ ಬಹಿಷ್ಕಾರ ಹೊಂದಿದವನು, ಯೆಹೂದ್ಯ ಸಮುದಾಯದಿಂದ ಪ್ರತ್ಯೇಕವಾಗುತ್ತಿದ್ದನು.[28] ಯೆಹೂದ್ಯರಲ್ಲಿ ಇದು ಬಹಳ ಘೋರವಾದ ಶಿಕ್ಷೆಯಾಗಿತ್ತು.

ಸ್ವಸ್ಥತೆ ಹೊಂದಿದವನ ಸಂಗಡ ಒಬ್ಬನು ಆನಂದಿಸಬೇಕಿತ್ತು. ಆದರೆ ಅಲ್ಲಿ ಯಾರೂ ಈ ಕಾರ್ಯವನ್ನು ಮಾಡಲಿಲ್ಲ. ನೆರೆಹೊರೆಯವರು, ಇವನು ಒಂದು ಸಮಸ್ಯೆ ಎಂದು ಭಾವಿಸಿದ್ದರು. ಅವನ ತಂದೆತಾಯಿಗಳು ಸಹ ಇವನು ಒಂದು ಮುಳುಗುವ ಗುಂಡಿ ಅದರಿಂದ ಪಾರಾಗಲು ಯತ್ನಿಸಿದರು. 3ನೇ ಪ್ರಶ್ನೆಯ ಕುರಿತು - "ಆ ಮನುಷ್ಯನು ದೃಷ್ಟಿಯನ್ನು ಹೇಗೆ ಪಡೆದನು, ಈಗ ಇವನನ್ನೇ ಕೇಳಿರಿ, ಪ್ರಾಯದವನಾಗಿದ್ದಾನಲ್ಲಾ[29], ಇವನೇ ತನ್ನ ವಿಷಯವಾಗಿ ಹೇಳುವನು ಅಂದರು" (ವಚನ 21).

### ಕಣಜದ ಗೂಡನ್ನು ನಾಶಮಾಡಬೇಕಿತ್ತು (ವಚನಗಳು 24-34)

ಅವನ ತಂದೆ ತಾಯಿಗಳಿಂದ ಅರ್ಹ ಉತ್ತರವನ್ನು ಪಡೆಯದೆ ಹೋದದ್ದರಿಂದ, ಅವರು

ಮಗನ ಕಡೆಗೆ ದೃಷ್ಟಿ ಬೀರಿದರು. "ಅವರು ಅವನನ್ನು ಎರಡನೆಯ ಸಾರಿ ಕರೆದರು" (ವಚನ 24ಎ). ಅವರು ನಕರಾತ್ಮಕ ದೃಷ್ಟಿಹೊಂದಿದ್ದರೆಂದು ಆ ಭಿಕ್ಷುಕನು ಅರಿತುಕೊಂಡನು ಅವರ ಅಸೂಯೆಯ ಕುರಿತು ಅವನು ಕೇಳಿದ್ದನಷ್ಟೆ, ಆದರೆ ಈಗ ಮೊದಲನೆಯ ಬಾರಿಗೆ ಅವರ ಕಣ್ಣಿನಲ್ಲಿದ್ದ, ಸುಳ್ಳನ್ನು ತುಟಿಗಳಲ್ಲಿ ಅಸಹ್ಯವನ್ನು ಅವರ ಕಣ್ಣಿನ ಉಬ್ಬಿನಲ್ಲಿ ಅಪನಂಬಿಕೆಯನ್ನು ಕಂಡನು.

ಅವರು ಅವನಿಗೆ, "ನೀನು ದೇವರಿಗೆ ಮಾನ ಬರುವಂತೆ ಹೇಳು, ಆ ಮನುಷ್ಯನು ಭಕ್ತಿಹೀನನು ಅಂದರು" (ವಚನ 24ಬಿ). "ದೇವರಿಗೆ ಮಾನ" ಅಂದರೆ ಮಾನವನ್ನು ಯೇಸುವಿಗೆ ಸಲ್ಲಿಸದೆ, ದೇವರಿಗೆ ನೀಡು ಎಂಬ ಅರ್ಥವಾಗಿದೆ. "ಒಂದು ವೇಳೆ" ಸತ್ಯವನ್ನೇ ಹೇಳುತ್ತೇನೆ ಎಂಬುದಕ್ಕೆ ಪ್ರಮಾಣದ ಹೇಳಿಕೆಯಾಗಿರಬಹುದು (ನೋಡಿ ಯೋಹಾನ 7:19). *"ನಿಜವಾಗಿ* ನಡೆದ ಸಂಗತಿಯನ್ನು ಹೇಳು" ಎಂಬ ಮಾತಾಗಿದೆ!

ಇಲ್ಲಿ ಒಂದು ಗುರುತರವಾದ ಬದಲಾವಣೆಯಾಯಿತು. ಅವರು ಅವನನ್ನು ಹಿಯಾಳಿಸಿದಷ್ಟು ಅವನು ಬಲಗೊಂಡನು, ಅವನ ಭಕ್ತಿ ಅಧಿಕವಾಯಿತು. ಅವನು ಕುರುಡನೂ, ಭಿಕ್ಷುಕನೂ, ಅವಿದ್ಯಾವಂಥನೂ ಆಗಿದ್ದಾಗ್ಯೂ, ತನ್ನ ವಿರೋಧಿಗಳನ್ನು ಬಲವಾಗಿ ಎದುರಿಸಿದನು.

ಅವನು ಅವರಿಗೆ, "ಆತನು ಭಕ್ತಿಹೀನನೋ ಏನೋ ನಾನರಿಯೇ, ಒಂದು ಮಾತ್ರ ಬಲ್ಲೆ, ಕುರುಡನಾಗಿದ್ದೆನು, ಈಗ ಕಣ್ಣು ಕಾಣುತ್ತವೆ ಅಂದನು" (ವಚನ 25). ಅವರು ಅವನನ್ನು ಇನ್ನೂ ಒತ್ತಾಯಿಸಿದರು (ವಚನ 26). ಬೇಸರಗೊಂಡ ಆ ಮನುಷ್ಯನು ಅವರಿಗೆ, "ನಿಮಗೆ ಹೇಳಿದನೆಲ್ಲಾ ನೀವು ಕೇಳಲಿಲ್ಲ; ಯಾಕೆ ತಿರುಗಿ ಕೇಳಬೇಕೆಂದಿದ್ದೀರಿ?" (ವಚನ 27ಎ). "ಆತನ ಶಿಷ್ಯರಾಗುವದಕ್ಕೆ ನಿಮಗೂ[30] ಮನಸ್ಸುಂಟು[31] ಅಂದನು (ವಚನ 27ಬಿ).

ಅವರು ಮನ ಚುಚ್ಚಿದವರಂತಾಗಿ, ಅವನಿಗೆ ಕಠಿಣವಾಗಿ: ನೀನು ಆ ಮನುಷ್ಯನ ಶಿಷ್ಯ; ನಾವು ಮೋಶೆಯ ಶಿಷ್ಯರು; ಆದರೆ ಇವನು ಎಲ್ಲಿಯವನೋ ಅರಿಯವು ಅಂದರು (ವಚನಗಳು 28, 29). "ಅವನು ಅವರಿಗೆ ಈ ಆಶ್ಚರ್ಯ ಸಂಗತಿಯನ್ನು ಕೇಳಿರಿ" (ವಚನ 30ಎ). "ಆತನು ನನಗೆ ಕಣ್ಣುಕೊಟ್ಟರೂ, ಆತನು ಎಲ್ಲಿಯವನೂ ನಿಮಗೆ ಗೊತ್ತಿಲ್ಲದೆ ಇರುವದು ಆಶ್ಚರ್ಯವಲ್ಲವೋ?" (ವಚನ 30ಬಿ)!

ಆ ಮನುಷ್ಯನು ಅವರಿಗೆ, "ಭಕ್ತಿಹೀನರ ಪ್ರಾರ್ಥನೆಯನ್ನು ದೇವರು ಕೇಳುವದಿಲ್ಲ ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನೋ ಅವನ ಪ್ರಾರ್ಥನೆಯನ್ನು ಕೇಳುತ್ತಾನೆಂದು ಬಲ್ಲೆವು" (ವಚನ 31). ಆ ನಾಯಕರು ಮೋಶೆಯ ಅನುಯಾಯಿಗಳಾಗಿದ್ದರೂ, ದೇವರು ಪಾಪಿಗಳ ಪ್ರಾರ್ಥನೆಯನ್ನು ಕೇಳುವದಿಲ್ಲ ಎಂದು ಸೂಚನೆ ನೀಡಿದನು (1 ಸಮುವೇಲ 8:18; ಯೋಬ 27:9; ಕೀರ್ತನೆ 18:41; 34:15, 16; 66:18; 145:19, 20; ಜ್ಞಾನೋಕ್ತಿ 1:28; 15:29; ಯೆಶಾಯ 1:15; 59:2; ಯೆಹೆಜ್ಕೇಲ 8:18).[32]

ಅವನು ಮುಂದುವರೆದು, "ಕಣ್ಣುಕೊಟ್ಟ ಸಂಗತಿಯನ್ನು ಲೋಕಾಧಿಯಿಂದ ಒಬ್ಬರೂ ಕೇಳಿದ್ದಿಲಾ" (ವಚನ 32). ಈ ಹಿಂದೆ ಮಹತ್ತರ ಕಾರ್ಯಗಳು ನಡೆದಿವೆ, ಆದರೆ ಯೇಸು ಲೋಕಕ್ಕೆ ಬರುವವರಗೆ ಯಾರು ಸಹ ಕಣ್ಣಿನ ದೃಷ್ಟಿಯನ್ನು ನೀಡಿರಲಿಲ್ಲ.[33] ಈ ಹಿಂದೆ ಯೇಸು ಸಹ ಯಾರಿಗೂ ಕಣ್ಣನ್ನು ಸ್ವಸ್ಥಮಾಡುವ[34] ಕಾರ್ಯವನ್ನು ಮಾಡಿರಲಿಲ್ಲ.

ನಂತರ ಅವನು, "ಈತನು ದೇವರಿಂದ ಬಂದವನಲ್ಲದಿದ್ದರೆ, ಏನೂ ಮಾಡಲಾರದೆ ಇರುತ್ತಿದ್ದನು ಅಂದನು" (ವಚನ 33). ಫರಿಸಾಯರು ತಪ್ಪಾದ ತರ್ಕವನ್ನು ಹೊಂದಿದ್ದಾಗ್ಯೂ ಆ ಕುರುಡನು ಯೇಸುವಿನ ಕುರಿತಾದ ಘನ ಸತ್ಯವನ್ನು ಪ್ರಚುರಪಡಿಸಿದನು:

- ಮಹಾ ಪೀಠಿಕೆ: "ದೇವರು ಪಾಪಿಗಳ ಪ್ರಾರ್ಥನೆಯನ್ನು ಕೇಳುವದಿಲ್ಲ."
- ಪೀಠಿಕೆ: "ದೇವರು ಈತನ ಪ್ರಾರ್ಥನೆಯನ್ನು ಕೇಳುತ್ತಾನೆ."[35]
- ಮತ್ತಾಯ: ಆದ್ದರಿಂದ "ಆತನು ಪಾಪಿಯಲ್ಲ!"

ಅವನ ತರ್ಕಕ್ಕೆ ಅ ನಾಯಕರು ಪ್ರತಿವಾದ ಮಾಡಲಿಲ್ಲ. ಆದರೆ ತಮ್ಮ ಹಳೆಯ ಕ್ರಮವನ್ನು ಹಿಂಬಾಲಿಸಿದರು. ವಾದಕ್ಕೆ ಪ್ರತಿವಾದ ನೀಡಿದಾಗ ವಾದ ಮಾಡಿದವನನ್ನು ಎದುರಿಸುವನು. "ನೀನು ಕೇವಲ ಪಾಪದಲ್ಲಿ ಹುಟ್ಟಿದವನು,[36] ನಮಗೆ ಉಪದೇಶ ಮಾಡುತ್ತೀಯಾ? ಅಂದರು (ವಚನ 34ಎ; ಒತ್ತಿ ಹೇಳಿದ್ದು ನನ್ನದು).

ನಂತರ ಅವರು ಅವನನ್ನು ಹೊರಗೆ ಹಾಕಿದರು (ವಚನ 34ಬಿ). ಅವರು ಅವನನ್ನು ಬಾಗಿಲಿನಿಂದ ಹೊರ ತಳ್ಳಿದರು, ಅಂದರೆ ಅವನ ತಂದೆ ತಾಯಿಗಳು ಯಾವ ಶಿಕ್ಷೆಗಾಗಿ ಹೆದರಿದರೋ ಆ ಶಿಕ್ಷೆಯನ್ನೇ ಈ ಮನುಷ್ಯನು ಹೊಂದಿದನು - ಅವನು "ದೇವ ಮಂದಿರದಿಂದ ಹೊರ ಹಾಕಿದರು" (ವಚನ 22). ಜನರಿಂದ ಪ್ರತ್ಯೇಕವಾದನು,[37] ಅದು ಅವನಿಗೆ ಎಂಥಹ ಅನುಭವದ ದಿನವಾಯಿತು[38] ಮುಂಜಾನೆ ಕುರುಡನಾಗಿದ್ದ, ಹಗಲಿನಲ್ಲಿ ಗುಣಹೊಂದಿದನು, ಆ ಪ್ರದೇಶದ ಅಧಿಕಾರಿಗಳ ಮುಂದೆ ಹಾಜಾರಾದನು. ಸಾಯಂಕಾಲದ ಸಮಯದಲ್ಲಿ ದೇವರ ಸಾನಿದ್ಯ ಎನ್ನಿಸಿಕೊಳ್ಳುವಂಥ ಆಲಯದಿಂದ ಹೊರ ಹಾಕಲ್ಪಟ್ಟನು!

**ರಕ್ಷಿಸಲ್ಪಡಬೇಕಾಗಿದ್ದ ಒಬ್ಬ ವ್ಯಕ್ತಿ (ವಚನಗಳು 35-38)**

ಅವನು ಅವನ ಅಂಗಳದಿಂದ ಎಲ್ಲಿಗೆ ಹೋದನು? ಅವನು ದೇವಾಲಯದಲ್ಲಿ ತಂಗಲಾಗಲಿಲ್ಲ, ತನ್ನ ಭಿಕ್ಷೆ ಬೇಡುವ ಸ್ಥಳಕ್ಕೆ ಅಥವಾ ತನ್ನ ಮನೆಗಾಗಲೀ, ತನ್ನ ನೆರೆಹೊರೆಯವರ ಒಳಗಾಗಲೀ ಹಿಂದಿರುಗಲು ಸಾಧ್ಯವಾಗಲಿಲ್ಲ.[39] ಅವನು ತಂಗಲು ಯಾವದೇ ಸ್ಥಳವಿರಲಿಲ್ಲ. ಈ ಅನುಭವವನ್ನು ನಿಮ್ಮಲ್ಲಿ ಕೆಲವರು ಅನುಭವಿಸಿದ್ದೀರಿ.

ಒಂದು ವೇಳೆ ಅವನು ಒಂದು ಸಾರ್ವಜನಿಕ ಸ್ಥಳಕ್ಕೆ ತಂಗಲು ಹೋಗಿರಬಹುದು (ವಚನಗಳು 35, 39, 40). ಅವನು ಎಲ್ಲಿ ಹೋದನೆಂದು ಯೇಸು ತಿಳಿದುಕೊಂಡನು: ಅವನನ್ನು ಹೊರಗೆ ಹಾಕಿದರೆಂದು ಯೇಸು ಕೇಳಿ ಅವನನ್ನು ಕಂಡುಕೊಂಡು, ಅವನ ಬಗ್ಗೆ ಯೇಸು (ವಚನ 35ಎ) ಕಾಳಜಿ ವಹಿಸಿದನು. ನಮಗೂ ಕಾಳಜಿ ವಹಿಸಿದ್ದಾನೆ (1 ಯೋಹಾನ 4:10). ಯೇಸು ಅವನನ್ನು ಒಬ್ಬ ವ್ಯಕ್ತಿಯನ್ನಾಗಿ ಪರಿಗಣಿಸಿದನು. ಈ ಹಿಂದೆ ಅವನನ್ನು ಸ್ವಸ್ಥತೆ ಅಗತ್ಯವಿದ್ದ ವ್ಯಕ್ತಿಯನ್ನಾಗಿ ಯೇಸು ಕಂಡಿದ್ದನು, ಈ ಅವನನ್ನು ರಕ್ಷಣೆಗೆ ಅಗತ್ಯವಿದ್ದ ವ್ಯಕ್ತಿಯನ್ನಾಗಿ ಯೇಸು ಕಂಡಿದ್ದನು, ಈ ಅವನನ್ನು ರಕ್ಷಣೆಗೆ ಅಗತ್ಯವಿದ್ದ ವ್ಯಕ್ತಿಯನ್ನಾಗಿ ಕಂಡನು.

ಈ ಗುಣ ಹೊಂದಿದವನಿಗೆ, "ನೀನು ಮನುಷ್ಯ ಕುಮಾರನನ್ನು ನಂಬುತ್ತಿಯಾ?"[40] ಎಂದು ಕೇಳಿದನು (ವಚನ 35ಬಿ). ಗ್ರೀಕ್ ಭಾಷೆಯ ಪ್ರಕಾರ "ಮನುಷ್ಯ ಕುಮಾರನಲ್ಲಿ ನಂಬಿಕೆ ಇದೆಯೇ?"[41] ಅದಕ್ಕವನು, ಆತನು ಯಾರು ಸ್ವಾಮಿ?[42] ತಿಳಿಸಿದರೆ ಆತನನ್ನು ನಂಬುತ್ತೇನೆ ಅಂದನು (ವಚನ 36). ಈ ಹಿಂದೆ ಅವನು ಯೇಸುವಿನ ಕುರಿತು ಕೇಳಿದ್ದನೇ ಹೊರತು ಆತನನ್ನು ಕಣ್ಣಾರೆ ನೋಡಿರಲಿಲ್ಲ. ಅವನಲ್ಲಿ ನಂಬಿಕೆ ಇಲ್ಲದ್ದನ್ನು ಸಹ ಗಮನಿಸಿ. ಪ್ರಪಂಚದ ಅನೇಕ ಸಂಗತಿಗಳ ದೆಸೆಯಿಂದ ಅವನು ನಂಬುವ ಸಾಧ್ಯತೆ ಇರಲಿಲ್ಲ. ನಂಬಿಕೆಯು ಚಿತ್ತವಾ ಗಿರುತ್ತದೆ ಹೊರತು ಜ್ಞಾನವಲ್ಲ.

ಯೇಸು ಅವನಿಗೆ, "ನೀನು ಅವನನ್ನು ಕಂಡಿದ್ದೀ, ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಅವನು ಅಂದನು" (ವಚನ 37) ಅಂದರೆ, ನೀನು ನೋಡುತ್ತಿರುವ ಮನುಷ್ಯಕುಮಾರನಾದ ನಾನೇ ಅವನು ಅಂದನು!

ಕ್ರಿಸ್ತನ ಮಾತನ್ನು ಅ ಕೇಳಿದಾಗ, ಅವನಲ್ಲಿದ್ದ ಸಂಶಯಗಳು ಮಾಯವಾಗಿದೆ. "ನಾನು ನಂಬುತ್ತೇನೆ ಸ್ವಾಮಿ ಅಂದನು" (ವಚನ 38ಎ). ಕೊಳದ ಬಳಿಯಲ್ಲಿ ಅವನಿಗೆ ದೃಷ್ಟಿ ಬರಲು, ಕೇವಲ ಕೆಲವೇ ಕ್ಷಣಗಳು ಬೇಕಾಯಿತು. ಆದರೆ ಅವನಲ್ಲಿದ್ದ ಆತ್ಮೀಕ ಕುರುಡು ತನ ನಿವಾರಣೆಯಾಗಲು ಹಲವಾರು ತಾಸುಗಳೇ ಬೇಕಾಯಿತು!

ಆ ಮನುಷ್ಯ ನಂಬಿಕೆಯ ಪ್ರಯಾಣ ಅಂತ್ಯಗೊಂಡಿತು: ಅವನು ಯೇಸುವನ್ನು ಕುರಿತು,

"ಯೇಸು ಎಂಬಾತನು" ಎಂದು ಹೇಳಿದ್ದನು (ವಚನ 11) ನಂತರ, "ಆತನು ಪ್ರವಾದಿ" ಎಂದಿದ್ದನು (ವಚನ 17). ಮತ್ತು ಆತನು "ದೇವರಿಂದ ಬಂದಾತನು" ಅಂದನು (ವಚನ 33). ಅಂತಿಮವಾಗಿ, ಆತನನ್ನು "ಸ್ವಾಮಿ" ಎಂದನು (ವಚನ 38; ಅಪೊಸ್ತಲರ ಕೃತ್ಯಗಳು 2:36; 1 ಕೊರಿಂಥ 12:3). ಒಬ್ಬ ಮನುಷ್ಯನಿಗೆ ಸಮೀಪಕ್ಕೆ ಹೋಗುವಾಗ, "ಆತನ ಮಹತ್ವವನ್ನು ಅರಿತು, ಆತನನ್ನು ತಾತ್ಕಾಲಿಕವಾದ ಸತ್ಯವೆಂದು ಮಾತ್ರ ಅರಿಯದೆ, ಆತನು ನಿತ್ಯವಾದ ಸತ್ಯ ಎಂದು ಸಹ ಅರಿಯುತ್ತೇವೆ."[43]

ಗುಣ ಹೊಂದಿದವನು "ಆತನಿಗೆ ಅಡ್ಡಬಿದ್ದನು" (ವಚನ 38ಬಿ).[44] ಅವನು ಸ್ವಯಂ ಪ್ರೇರಿತವಾಗಿ ಆರಾಧಿಸದನೇ ಹೊರತು ಒತ್ತಾಯದಿಂದ ಮಾಡಲಿಲ್ಲ. ತನ್ನ ದೇಹ ಹಾಗೂ ಆತ್ಮಕ್ಕೆ ಬೆಳಕು ನೀಡಿದಾತನನ್ನು ಆರಾಧಿಸಲು ಮನಸ್ಸು ಮಾಡಿದ್ದನು. ಒಬ್ಬನು ಕ್ರಿಸ್ತನು ಮಾಡಿರುವ ಉಪಕಾರಗಳನ್ನು ನೆನಪು ಮಾಡುವಾಗ, ಆತನನ್ನು ಅವನು ಅಡ್ಡಬಿದ್ದು ಆರಾಧಿಸುವನಷ್ಟೆ.

## ಕುರುಡರಾದ ಮನುಷ್ಯರು (ವಚನಗಳು 39-41)

ಕಥೆಯು ಇನ್ನು ಮುಗಿದಿರುವದಿಲ್ಲ. ನಂಬಿಕೆಯಿಂದ ಮುಂದೆ ಬಂದ ಕುರುಡನನ್ನು ಹಾಗು ಆತ್ಮೀಕವಾಗಿ ಕುರುಡರಾಗಿ ನಂಬಿಕೆಗೆ ಬಾರದ ಫರಿಸಾಯರ ನಡುವಿನ ವ್ಯತ್ಯಾಸವನ್ನು ಯೇಸು ಪರಿಶೀಲನೆ ಮಾಡಿದನು. ಆ ಕುರುಡನು ಬೆಳಕಿನೆಡೆಗೆ ಸಾಗಿದರೆ, ಫರಿಸಾಯರು ಗಾಢವಾದ ಅಂಧಕಾರದ ಬಳಿಗೆ ಸಾಗಿದರು.

ಯೇಸು ಅವನನ್ನು ಒಂದು ಸಾರ್ವಜನಿಕ ಸ್ಥಳದಲ್ಲಿ ಕಂಡುಕೊಂಡನು ಎಂದು ಈ ಹಿಂದೆಯೇ ತಿಳಿಸಿದ್ದೇನೆ. ಪ್ರತಿಯೊಬ್ಬರು ಯೇಸುವಿನ ನಾಮವನ್ನು ಜಪಿಸುತ್ತಿದ್ದರು (ಯೋಹಾನ 7:12). ಮತ್ತು ಅವನನ್ನು ಹೊರಗೆ ಹಾಕಿದರೆಂದು ತಿಳುಕೊಂಡರು (9:35). ಕ್ರೂರಿಗಳ ಎರಡು ಗುಂಪಿನವರು, ಅಂದರೆ ಯೇಸುವಿನ ಪ್ರಾಣವನ್ನು ತೆಗೆಯಬೇಕೆಂದಿದ್ದವರೂ ಹಾಗೂ ಆ ಕುರುಡನನ್ನು ಹೊರ ಹಾಕಿದವರು, ಜನರನ್ನು ಒಂದು ಕಡೆ ಸೇರಿಸಲಾರಂಭಿಸಿದರು (ವಚನ 40).

ಕ್ರಿಸ್ತನು ಜನರನ್ನು ನೋಡಿ, "ನಾನು ತೀರ್ಪಿಗಾಗಿ ಈ ಲೋಕಕ್ಕೆ ಬಂದಿದ್ದೇನೆ" ಅಂದನು (ವಚನ 39ಎ). ಆತನು ಪಾಪಿಗಳನ್ನು ರಕ್ಷಿಸುವ ಸಲುವಾಗಿ ಈ ಲೋಕಕ್ಕೆ ಬಂದಿದ್ದನು (ಯೋಹಾನ 3:17; 12:47; ನೋಡಿ ಲೂಕ 19:10).[45] ಹಾಗೆಯೇ ತೀರ್ಪು ಮಾಡುವದು ಒಂದು ಕಾರಣವಾಗಿತ್ತು (ಯೋಹಾನ 5:22; 12:48). ಬೆಳಕು ಪ್ರಕಾಶಿಸುತ್ತದೆ ಹಾಗೂ ಬಹಿರಂಗ ಪಡಿಸುತ್ತದೆ.

ಆತನು ಬಂದಂಥ ಕಾರಣಗಳನ್ನು ಮುಂದುವರೆಸಿ: "ಕಣ್ಣಿಲ್ಲದವರಿಗೆ ಕಣ್ಣು ಬರುವವು ಕಣ್ಣಿದ್ದವರು ಕುರುಡರಾಗುವರು" ಅಂದನು (ವಚನ 39ಬಿ). ಕರ್ತನ ಮಾತಿನಲ್ಲಿ ಆಳವಾದ ಅರ್ಥವಿತ್ತು. ದೈಹೀಕ ಹಾಗೂ ಆತ್ಮಿಕ ಕುರುಡುತನದ ಅರ್ಥವನ್ನು ನೀಡಿದ್ದನು. ದೈಹೀಕವಾಗಿ ಕುರುಡರಾದವರು ದೃಷ್ಟಿ ಹೊಂದುವ ಹಾಗೂ, ಆತ್ಮಿಕವಾಗಿ ಕುರುಡರಾದವರಿಗೆ, ಆತ್ಮೀಕ ದೃಷ್ಟಿಯನ್ನು ನೀಡುವ ಕಾರಣದಿಂದ ಆತನು ಬಂದಿದ್ದನು.

ಆತನು ಮಾತನ್ನು ಕೇಳುತ್ತಿದ್ದ ಫರಿಸಾಯರು, ಯೇಸು - ತಮ್ಮ ಕುರಿತಾಗಿಯೇ ಹೇಳುತ್ತಿರುವನೆಂದು ಅರಿತುಕೊಂಡರು. "ನಾವು ಕುರುಡರೇನು? ಅಂದರು" (ವಚನ 40). ಅಂದರೆ "ಯೇಸು ನಮ್ಮ ಬಗ್ಗೆ ಮಾತನಾಡುತ್ತಿಲ್ಲ ಎಂಬ ಅರ್ಥ" ಯೇಸು ಅವರಿಗೆ, "ನೀವು ಕುರುಡರಾಗಿರುತ್ತಿದ್ದರೆ ನಿಮಗೆ ಪಾಪವು ಇರುತ್ತಿರಲಿಲ್ಲ; ನಮಗೆ ಕಣ್ಣು ಕಾಣಿಸುತ್ತದೆ ಅನ್ನುತ್ತಿರಾದರಿಂದ ನಿಮ್ಮ ಪಾಪವು ಉಳಿದದೆ" ಅಂದನು (ವಚನ 41). ಯೇಸು ತನ್ನ ಮಾತಿನಲ್ಲಿ ಚಾಟಾಕ್ಷವನ್ನು ತೋರಿದನು. ಮತ್ತು ಆತನು ಅವರಿಗೆ, "ನೀವು ದೈಹೀಕವಾಗಿ ಕುರುಡರಾಗಿದ್ದರೆ, ದೇವರೊಂದಿಗಿನ ನಿಮ್ಮ ಸಂಬಂಧ ಕೆಡುತ್ತಿರಲಿಲ್ಲ ಅಂದರೆ ಎಲ್ಲಿಯವರೆಗೆ ನಿಮ್ಮ ಕುರುಡುತನವನ್ನು ಅಡಗಿಸಿಕೊಳ್ಳುವಿರೋ, ಅಲ್ಲಿಯವರೆಗೆ ನಿಮಗೆ ಯಾವುದೇ ನಿರೀಕ್ಷೆ

ಇರುವದಿಲ್ಲ'' ಅಂದನು.

ದೈಹೀಕವಾದ ಕುರುಡುತನದಿಂದ ಉದ್ಭವಿಸುವ ಬಾಧೆಗಳ ಆತ್ಮೀಕವಾದ ಕುರುಡು ತನದಿಂದ ಉಂಟಾಗುವ ಅನಾನುಕೂಲತೆಗಳಿಗೆ ಹೋಲಿಸಿದರೆ, ದೈಹೀಕ ಬಾಧೆಗಳು ಏನೂ ಅಲ್ಲದವುಗಳಾಗಿವೆ. ಯಥಾರ್ಥ ಹೃದಯವನ್ನೇ ದೇವರು ಮೆಚ್ಚುತ್ತಾನೆ (ಲೂಕ 8:15). ನಾವು ಸತ್ಯವನ್ನು ಪ್ರೀತಿಸಬೇಕು (2 ಥೆಸಲೋನಿಕ 2:10). ತಗ್ಗಿದವರಾಗಿ ವಾಕ್ಯವನ್ನು ಗಮನಿಸಬೇಕು (ಯಾಕೋಬ 1:21). ದೇವರ ವಾಕ್ಯದ ಕುರಿತಾದ ತಪ್ಪಾಭಿಪ್ರಾಯಗಳನ್ನು ಕ್ರಮಪಡಿಸಿಕೊಳ್ಳಬೇಕು (2 ಪೇತ್ರ 3:16). "ಕಣ್ಣಿದ್ದು, ನೋಡದೆ ಇರುವವನು, ಕುರುಡನಿಗಿಂತ ಉತ್ತಮನಲ್ಲ'' ಎಂದು ಒಬ್ಬರು ಹೇಳಿರುವರು.

## ಮುಕ್ತಾಯ

ಗುಣ ಹೊಂದಿದ ಕುರುಡನು ಏನಾದನು ಎಂಬ ಮಾಹಿತಿಯು ಇರುವದಿಲ್ಲ. ಅವನನ್ನು ದೇವಾಲಯದಿಂದ, ಹೊರ ಹಾಕಿದ್ದ ನಿಮಿತ್ತ ಅವನ ಭವಿಷ್ಯ ಸಾರಾಗವಾಗಿರಲಾರದು. ಅವನಿಗುಂಟಾದ ಸಕಲಕಾರ್ಯದ ನಿಮಿತ್ತವಾಗಿ, ಅವನು ಕ್ರಿಸ್ತನಿಗಾಗಿ ಯಥಾರ್ಥ ಸೇವಕನಾಗಿರಬಹುದು ಎಂದು ನಾನು ಊಹಿಸುತ್ತೇನೆ.

ಯೇಸುವಿನ ಬೋಧನೆಯನ್ನು ಹೊರತುಪಡಿಸಿ, ಕುರುಡನಿಗೆ ಉಂಟಾದ ಕಾರ್ಯಗಳನ್ನು ಪ್ರಚುರಪಡಿಸಿರಿ ಎಂದು ತಿಳಿಸಿರುವದಿಲ್ಲ. "ಯೇಸು ಲೋಕಕ್ಕೆ ಬೆಳಕಾಗಿದ್ದಾನೆ'' ವಿಶೇಷ ವೇನೆಂದರೆ, ನಾವುಗಳು ಆತ್ಮೀಕವಾಗಿ ಕುರುಡಾಗಿರುವದನ್ನು ಅರಿಯದೆ ಇರಬಹುದು. ಯೋಹಾನ 9ನೇ ಅಧ್ಯಾಯವು ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳಬೇಕೆಂದು ಎಚ್ಚರಿಸುತ್ತದೆ (ನೋಡಿ 2 ಕೊರಿಂಥ 13:5).

ನೀನು ಇನ್ನೂ ಸಹ ಬೆಳಕಿಗೆ ಬಾರದೆ ಇದ್ದರೆ ಈ ದಿನವೇ ಬೆಳಕಿನೆಡೆಗೆ ಬಾ ಎಂದು ಉತ್ತೇಜಿಸುತ್ತೇನೆ.[46] ದೈಹೀಕನಾಗಿ ಕುರುಡನಾಗಿದ್ದು, ಒಂದು ವೇಳೆ ಗುಣ ಹೊಂದುವದಾದರೆ, ನೀನು ಎಷ್ಟೊಂದು ಆನಂದ ಹೊಂದಿರಬಹುದಲ್ಲವೇ. ಆತ್ಮೀಕ ದೃಷ್ಟಿಯನ್ನು ಪಡೆಯುವದು ಅಧಿಕವಾದ ಸಂತೋಷವಲ್ಲವೇ!

ಕಣ್ಣಿನ ಶಸ್ತ್ರ ಚಿಕಿತ್ಸೆಯ ತಜ್ಞರಾದ ಜಾಕ್ ರೋಪರ್‌ರವರು, ಕಣ್ಣಿನ ಶಸ್ತ್ರ ಚಿಕಿತ್ಸೆ ಆದ ನಂತರ, ಆ ರೋಗಿಯ ಕಣ್ಣುಗಳ ಮೇಲಿನ ಬಟ್ಟೆಗಳನ್ನು ಕತ್ತಲಿನ ಕೋಣೆಯಲ್ಲಿ ಬಿಚ್ಚುತ್ತಾರೆ. ಆ ರೋಗಿಯ ಕಣ್ಣುಗಳಿಗೆ ಆ ಕತ್ತಲಿನ ಪರಿಸರದ ಅನುಭವವಾದ ನಂತರ, ಕೊಠಡಿಯಲ್ಲಿರುವನ ಒಂದು ಕಿಟಕಿಯನ್ನು ತೆರೆಯುತ್ತಾರೆ. ಆಗ ಆ ರೋಗಿಯು "ಹಾ. ಈಗ ನನಗೆ ಬೆಳಕು ಕಾಣಿಸುತ್ತದೆ!'' ಎಂದು ಹೇಳುತ್ತಾನೆ. ಆದರೆ ವೈದ್ಯನು ಅವನಿಗೆ ಇಲ್ಲ. ಇನ್ನು ನಿನಗೆ ಕಾಣಿಸುತ್ತಿರುವದಿಲ್ಲ! ಅವರು ಅವನನ್ನು ತಮ್ಮ ಕೊಠಡಿಯಲ್ಲಿರುವ ಚಿತ್ರಪಠವನ್ನು ಓದಲು ಕರಕೊಂಡು ಹೋಗುತ್ತಾರೆ. ಆ ಚಿತ್ರಪಠದಲ್ಲಿ ಅವರು ಯೋಹಾನ 3:16 ವಾಕ್ಯವನ್ನು ಬರೆಯಸಿದ್ದಾರೆ. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.'' ನಂತರ ವೈದ್ಯರಾದ ರೋಪರ್ ರವರು, ಈಗ ನಿನಗೆ ಬೆಳಕು ಕಾಣಿಸುತ್ತಿದೆ'' ಎನ್ನುವರು.[47]

ನೀವು ಬೆಳಕನ್ನು ಕಂಡಿರುವಿರಾ? "ಅಮೇಜಿಂಗ್ ಗ್ರೇಸ್'' ಎಂಬ ಪದದಲ್ಲಿ, "ಒಂದು ಸಾರಿ ನಾನು ಕಳೆದು ಹೋಗಿದ್ದೆ, ಈಗ ರಕ್ಷಿಸಲ್ಪಟ್ಟಿದ್ದೇನೆ.'' ಕುರುಡನಾಗಿದ್ದೆ, ಆದರೆ ಈಗ ಕಾಣುತ್ತಿದ್ದೇನೆ[48] ನೀವು ಕರ್ತನನ್ನು ಪ್ರೀತಿಸಿ, ವಿಧೇಯರಾದರೆ, ದೃಷ್ಟಿಯನ್ನು ಹೊಂದಲು ಸಾಧ್ಯವಿದೆ!

## ಮಾಹಿತಿ

ಯೋಹಾನ 3:16ರ ವಾಕ್ಯಗಳು ಬರೆದಿರುವ ಪಟವನ್ನು ನೀವು ಮಾಡಬಹುದು. ಅಮೇಜಿಂಗ್ ಗ್ರೇಸ್ ಎಂಬ ಹಾಡನ್ನು ಹಾಡಬಹುದು.

ಈ ಪ್ರಸಂಗದಲ್ಲಿ ಈ ಅಧ್ಯಾಯವನ್ನು ಪೂರ್ಣವಾಗಿ ವಿವರಿಸಲು ಪ್ರಯತ್ನಿಸಿರುವೆನು. ಇದರಲ್ಲಿ ಇರುವ ಒಂದು ಮುಖ್ಯ ಪ್ರಸ್ತಾಪವನ್ನು ಧ್ಯಾನಿಸಬಹುದು. ಭಿಕ್ಷುಕನ "ನಂಬಿಕೆಯ ಹಾದಿಯನ್ನು ವಿವರಿಸಬಹುದು." ಅವನು ಬಳಸಿದ ಯೇಸುವಿನ ಹೆಸರನ್ನು ತಿಳಿಸಬಹುದು: ಯೇಸು ಎಂಬಾತನು, ಪ್ರವಾದಿ ದೇವರಿಂದ ಬಂದ ವ್ಯಕ್ತಿ, ಅಂತಿಮವಾಗಿ "ಸ್ವಾಮಿ" ಎಂಬುದನ್ನು ತಿಳಿಸಬಹುದು.

"ಕತ್ತಲಿನಿಂದ ಬೆಳಕಿಗೆ" ಎಂಬ ಮುಖ್ಯ ಪ್ರಸ್ತಾಪವನ್ನು ವಿವರಿಸಿರಿ. ಇದಕ್ಕೆ ಸಂಬಂಧಪಟ್ಟ ಧೈಹೀಕ ಹಾಗೂ ಆತ್ಮೀಕ ಕುರುಡತನದ ಕುರಿತಾಗಿ ಪರಿಚಯಿಸಬಹುದು. ಇದರ ಕುರಿತಾಗಿ ಸತ್ಯವೇದವು ಅನೇಕ ವಾಕ್ಯಭಾಗಗಳನ್ನು ನೀಡುತ್ತದೆ (ಲೂಕ 6:39; 2 ಪೇತ್ರ 1:9; ಪ್ರಕಟನೆ 3:18). ಹೆಲೆನ್ ಕೆಲ್ಲರ್ ಅಥವಾ ಇತರ ಕುರುಡರ ನಿದರ್ಶನವನ್ನು ನೀಡಬಹುದು. ಒಬ್ಬ ಪ್ರಸಂಗಿಯು ಕುರುಡನ ಅನುಭವವನ್ನು ವರ್ಣಿಸುವ ಸಲುವಾಗಿ ಇಪತ್ನಾಲ್ಕು ತಾಸುಗಳ ಕಾಲ ತನ್ನ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದನು. ಬಿಳಿಯ ಕೋಲನ್ನು ಹಾಗು ಕುಪ್ಪಾದ ಕನ್ನಡಕವನ್ನು ಬಳಸಬಹುದು.

ನಮ್ಮಲ್ಲಿ ಉಂಟಾದ ಹಾಗು ಕುರುಡನಲ್ಲಿ ಉಂಟಾದ "ಪರಿವರ್ತನೆಯ" ಕುರಿತ ಅಂಶವನ್ನು ತಿಳಿಸಬಹುದು. ಈ ಮುಂದಿನ ಅಂಶಗಳಿಂದ ಆರಂಭಿಸಿರಿ. (1) ನಾವು ಆತ್ಮಿಕವಾಗಿ ಕುರುಡರಾಗಿದ್ದೇವೆ. ಕುರುಡನ ಹಾಗೆ ನಾವುಗಳು ಹುಟ್ಟುಕುರುಡರಲ್ಲ; ಆದರೆ ಸೈತಾನನು ನಮ್ಮನ್ನು ಕುರುಡರನ್ನಾಗಿಸಿದ್ದಾನೆ (2 ಕೊರಿಂಥ 4:4). (2) ನಮ್ಮನ್ನು ಆತ್ಮಿಕವಾಗಿ ಗುಣಪಡಿಸಲು, ದೇವರು ತಾನೇ ಮುಂದಾಗುತ್ತಾನೆ. (3) ಆತನು ನೀಡುವ ಸ್ವಸ್ಥತೆಯಲ್ಲಿ ನಾವುಗಳು ಪಾಲುಗಾರರಾಗಬೇಕೆಂದು ದೇವರು ಬಯಸುತ್ತಾನೆ (ರಕ್ಷಣೆ) ಯೇಸು ಕುರುಡನಿಗೆ ಹೋಗಿ ತೊಳಕೋ ಎಂದು ಹೇಳಿದ ನಿದರ್ಶನದಂತೆ. (4) ನೀರಿನಲ್ಲಿ ಯಾವುದೇ ಶಕ್ತಿ ಇಲ್ಲದಿದ್ದರೂ, ಆತನು ನೀರಿನಲ್ಲಿ "ತೋಳಕೋ" (ದೀಕ್ಷಾಸ್ನಾನ) ಅಂದನು. (5) ನಮ್ಮ ವಿಧೇಯತೆಗೆ ನಂಬಿಕೆಯೇ. (6) ಪರಿವರ್ತನೆಯ ಸಮುದಾಯದಲ್ಲಿ ನಮಗೆ ಅಧೈರ್ಯಮಾಡಲು ಜನರು ಕಾಯುತ್ತಿರುತ್ತಾರೆ ಚಾಕ್ ಬೋರ್ಡ್ ಹಾಗೂ ಓವರ್ ಹೆಡ್ ಪ್ರೊಜಿಕ್ಟರನ್ನು ಬಳಸಿರಿ.

ಕುರುಡನು, ಹಿರಿಸಭೆಯವರಿಗೆ ಹೇಳಿದ ಮಾತನ್ನು ನಾನು ಮೆಚ್ಚುತ್ತೇನೆ. "ನಾನು ಕುರುಡನಾದೆ ಆದರೆ ಈಗ ಕಾಣುತ್ತದೆ" (ಯೋಹಾವ 9:25ಬಿ). ಪ್ರತಿ ವಾದಗಳಿಗೋ ನೀವುಗಳು ಉತ್ತರ ನೀಡಲಾಗದು. ನಿಮ್ಮ ನಂಬಿಕೆಗೆ ಉಂಟಾಗುವ ಪ್ರತಿ ವಿರೋಧಕ್ಕೂ ನೀವು ಸ್ಪಂಧಿಸಲಾರಿರಿ. ಆದರೆ ದೇವರು ನಿಮ್ಮನ್ನು ರಕ್ಷಿಸಿ, ನಿಮಗೆ ಆಶೀರ್ವಾದ ನೀಡಿರುವದಾದರೆ, "ನಾನು ಕುರುಡನಾಗಿದ್ದೆ, ಈಗ ನೋಡುತ್ತೇನೆ" ಎಂದು ಭರವಸದಿಂದ ಹೇಳಬಹುದು. "ನನಗೆ ಒಂದು ಸಂಗತಿ ತಿಳಿದದೆ" ಎಂಬುದರ ಮೇಲೆ ಪ್ರಸಂಗಿಸಬಹುದು.

ಈ ಅಧ್ಯಾಯ ಕಥೆಗೆ ಅನುಗುಣವಾಗಿದೆ. ಕುರುಡನು ವಿವರಿಸಿದ ಕ್ರಮವನ್ನೇ ಅನುಸರಿಸಬಹುದು.

ಇನ್ನು ಕೆಲವು ಉಪಾಯಗಳು ಇಲ್ಲಿವೆ: "ಕುರುಡನು ಮೂರ್ಖರನ್ನು ಕರೆದನು" (ಚಿಲ್ಡನ್ ಬ್ಲೈಂಡ್ ಗೇಮ್) ಯೆಹೋಶುವ 10:12, 13ರ ಹಿನ್ನೆಲೆಯಿಂದ "ಸೂರ್ಯನು ನಿಂತ ದಿನ" ಎಂಬುದನ್ನು ಪ್ರಸಂಗಿಸಬಹುದು.

ಟಿಪ್ಪಣಿಗಳು

[1]ಕ್ರಿಸ್ತನ ಜೀವನ ಚರಿತ್ರೆಯಲ್ಲಿನ "ಯೋಹಾನನ ಸುವಾರ್ತೆಯಿಂದ" ಚರ್ಚೆಮಾಡಬಹುದು. [2]ಯೇಸು ತನ್ನ ವೈರಿಗಳಿಂದ ತಪ್ಪಿಸಿಕೊಂಡನು ಇದಕ್ಕೆ ಸಹಾಯವಾಗುವ ವಾಕ್ಯಗಳಿರುವದಿಲ್ಲ. [3]ಇದರ ಬಗ್ಗೆ ಆಲೋಚನೆಗಳು ಇರಬಹುದು. ಯೋಬನ ಸ್ನೇಹಿತರು ಯೋಬನು ಪಾಪಿಯಾದ್ದರಿಂದ ಸಮಸ್ಯೆಗೊಳಗಾದನು ಎಂದಿದ್ದರು. ಅದು ತಪ್ಪಾದ ಅಭಿಪ್ರಾಯವಾಗಿದೆ. ಪೌಲನ ಕುರಿತಾಗಿಯೂ ಈ ವಿಧವಾದ ಅಭಿಪ್ರಾಯ ಉಂಟಾಗಿತ್ತು. (ಅಪೊಸ್ತಲರ ಕೃತ್ಯಗಳು 28:4; ವಿಮೋಚನಕಾಂಡ 34:7.) ವ್ಯಯಕ್ತಿಕವಾದ ಪಾಪ ಪ್ರಶ್ನೆಯಿಲ್ಲ, ಅದು ಸಹಜವಾದ ಪರಿಣಾಮವಷ್ಟೆ. ಇಸ್ರಾಯೇಲ್ಯರು ದೇವರಿಂದ ಪ್ರತ್ಯೇಕವಾದ ನಿಮಿತ್ತ "ದಾಸರಾದರು" ಅ ಮಕ್ಕಳು ಹಾಗೂ ಮೊಮ್ಮಕ್ಕಳು ದಾಸರಾಗಿ ಜನಿಸಿದರು. [4]"ರಬ್ಬಿ" ಎಂಬುದು ಗೌರವದ ನಾಮಾಂಕಿತ "ಬೋಧಕನು" ಯೇಸು ರಬ್ಬಿಯ ತರಬೇತಿ ಪಡೆಯದೆ ಇದ್ದದರಿಂದ ಧಾರ್ಮಿಕ ಅಧಿಕಾರಿಗಳು ಆತನನ್ನು ರಬ್ಬಿ ಎಂದು ಪರಿಗಣಿಸಲಿಲ್ಲ. [5]ಒಬ್ಬನು ಹುಟ್ಟುವ ಮೊದಲೆ ಪಾಪಮಾಡಿರುವನು ಎಂದು ಕೆಲವು ರಬ್ಬಿಗಳು ಬೋಧಿಸುತ್ತಿದ್ದರು. ಗರ್ಭದಲ್ಲಿ ಅಥವಾ ಹಿಂದಿನ ಜನುಮದಲ್ಲಿ. [6]ಮಾದಕ ವಸ್ತುಗಳು ಹಾಗೂ ದೂಮಪಾನ ಗರ್ಭವನ್ನು ಹಾಗೂ ಆರೋಗ್ಯ ವನ್ನು ಕೆಡಿಸುತ್ತದೆ. [7]ಆ ಮುನುಷ್ಯನಾಗಲೀ ಅಥವಾ ಅವನ ತಂದೆತಾಯಿಗಳಾಗಲಿ ಪಾಪಮಾಡಲಿಲ್ಲ ಎಂದು ಯೇಸು ತಿಳಿಸಿದನು (ರೋಮಾಪುರ 3:23). ಪಾಪದ ನಿಮಿತ್ತವಾಗಿ ಅವನು ಕುರುಡನಾಗಲಿಲ್ಲ. [8]ಅದಾಮ ಹಾಗೂ ಅವ್ವಳು ಮಾಡಿದ ಪಾಪದ ನಿಮಿತ್ತ (ಆದಿಕಾಂಡ 3:3, 17-19) ಸಂಕಟಗಳು ಉಂಟಾದವು. ಪಾಪ ಮಾಡಿದ ತಕ್ಷಣದ ಪರಿಣಾಮಗಳಿವೆ (ನೋಡಿ ಜ್ಞಾನೋಕ್ತಿ 13:15). ಸಕಲ ಬಾಧೆಗಳಿಗೂ ವ್ಯಯಕ್ತಿಕ ಪಾಪಗಳು ಕಾರಣವಲ್ಲ, ಯೋಬನು ಪಾಪದ ನಿಮಿತ್ತ ಬಾಧೆ ಅನುಭವಿಸಲಿಲ್ಲ. ಕೀರ್ತನೆ 73ರಲ್ಲಿ ನೀತಿ ಮತ್ತು ಆಶೀರ್ವಾದದಕ್ಕೂ ಸಂಬಂಧವಿಲ್ಲ. ಅಥವಾ ಪಾಪಕ್ಕೂ ಮತ್ತು ಸಂಕಟಕ್ಕೂ ಸಂಬಂಧವಿಲ್ಲ (ಲೂಕ 13:2-5). [9]ವೈರಿಗಳ ಕುರಿತಾಗಿ ಕೀರ್ತನೆ 119:71; 2 ಕೊರಿಂಥ 12:9; ಇಬ್ರಿಯ 12:7-13; ಯಾಕೋಬ 1:2, 3; ಪ್ರಕಟನೆ 7:14ನ್ನು ನೋಡಿರಿ. [10]ಜೀವಿತ ಕೊಂಚವೇ (ಕೀರ್ತನೆ 90:5, 16; ಯಾಕೋಬ 4:14; 2 ಪೇತ್ರ 3:8). ದೇವರ ಕಾರ್ಯವು ತುರ್ತಾಗಿರುತ್ತದೆ (ಪ್ರಸಂಗಿ 4:15; ಎಫೆಸ 5:16).

[11]ಸ್ವಸ್ಥತೆಗಾಗಿ ಯೇಸು ಮೂರನೆಯ ಸಾರಿ ಉಗುಳನ್ನು ಬಳಸಿದನು (ಮಾರ್ಕ 7:33; 8:22-26). ಸ್ವಸ್ಥತೆಗೆ ನಿಖರವಾದ ಒಂದೇ ಕ್ರಮವನ್ನು ಆತನು ಬಳಸಲಿಲ್ಲ. ಕುರುಡನ ಕಣ್ಣನ್ನು ಮುಟ್ಟಿಗುಣಪಡಿಸಿದನು (ಉಗುಳನ್ನು ಮಾತ್ರ ಬಂದಿದನು) (ಮತ್ತಾಯ 9:27-31) ಒಂದು ಸಾರಿ ಮಾತ್ರ ಉಗುಳನ್ನು ಬಳಸಿದನು. ಶಕ್ತಿಯ ಕ್ರಮದಲ್ಲಿರದೇ ಆತನಲ್ಲೇ ಇತ್ತು (ಮಾರ್ಕ 8:22-26). [12]ಕೊಳದಲ್ಲಿ ತೊಳಕೋ ಎಂದು ಏಕೆ ಹೇಳಿದನು? ಆಶೀರ್ವಾದಕ್ಕಾಗಿ ಈ ರೀತಿ ಮಾಡುತ್ತಿದ್ದರು ಎಂದು ಸತ್ಯವೇದ ತಿಳಿಸುತ್ತದೆ. [13]"ಕೊಳದ" ವಿವರಣೆಗೆ ಹಿಂದಿನ ಪುಸ್ತಕ ನೋಡಿರಿ. [14]ಯೆರೂಸಲೇಮಿನ ಭೂಪಟ ನೋಡಿರಿ. [15]ಸ್ತ್ರೀಯರ ಬಾಗಿಲಿನ ಬಳಿಲಿನ ಬಳಿಯಿದ್ದ ಕುರುಡನಿಗೆ ಯೇಸು ಸಹಾಯಿಸಿದ್ದನು. ಬೆಥನಿಯ ಮಾರ್ಗದಲ್ಲಿ ಇರಬಹುದು (ಮತ್ತಾಯ 21:17; ಮಾರ್ಕ 11:11; ಯೋಹಾನ 11:18). ಕೊಳವು ದೂರದಲ್ಲಿರ ಬಹುದು. [16]ಇಂಗ್ಲೀಷ್‌ನಲ್ಲಿ ನಾಲ್ಕು ಗ್ರೀಕ್‌ನಲ್ಲಿ ಮೂರು ಪದಗಳು ಮಾತ್ರ ಇದೆ (ನೋಡಿ KJV). [17]ಅವನನ್ನು ವಿಚಾರಿಸಿದರು ಫರಿಸಾಯರಾಗಿದ್ದರು (ವಚನಗಳು 13, 15, 16, 40). ಅವರು "ಯೆಹೂದ್ಯರಾಗಿದ್ದರು" ಎಂದು ಎರಡು ಸಾರಿ ತಿಳಿಸಲಾಗಿದೆ (ವಚನಗಳು 18, 22). ಅವರು ಯೆರೂಸಲೇಮಿನ ಧಾರ್ಮಿಕ ನಾಯಕರಾಗಿದ್ದರು. ಅವರು ಅವನನ್ನು "ಹಿರೀಸಭೆಯ" ಬಳಿಗೆ ಕರೆ ದೊಯ್ದರು. [18]"ಮನುಷ್ಯ" ಎಂಬುದು ವಿವರಣೆಯ ನಾಮ. [19]ಸಂಪ್ರದಾಯದ ಪ್ರಕಾರ ಗಾಯಕ್ಕೆ ಉಗುಳನ್ನು ಬಳಸಬಾರದು ಮಣ್ಣನ್ನು ಕೆಸರು ಮಾಡುವದು ಸಹ ಗೋದಿಹಿಟ್ಟನ್ನು ಕಲಿಸುವ ಕೆಲಸದಂತೆ. [20]ಸಿಲ್ಲೊಗಿಸಮ್ ಎಂದರೆ "ನ್ಯಾಯಸಂಬಂಧವಾದ" ಪದ.

[21]ಯೆಹೂದ್ಯರು ಹಾಗೂ ಇತರರ ಮೇಲೆ ಪರಿಣಾಮ ಬೀರಿತ್ತು (ನೋಡಿ ಯೋಹಾನ 11:36, 37). [22]ಹಿಂದಿನ ಪುಸ್ತಕವನ್ನು ನೋಡಿರಿ (8:30, 31). [23]ಯೋಹಾನ 4:19ಕ್ಕೆ ಹೋಲಿಸಿ. [24]ಪ್ರವಾದಿಗಳಾದ ಎಲಿಯ ಹಾಗೂ ಎಲಿಷ ಇಬ್ಬರೂ ಸಹ ಮಹತ್ಕಾರ್ಯಗಳನ್ನು ಮಾಡಿದ್ದರು (1 ಅರಸುಗಳು 18; 2 ಅರಸುಗಳು 2:19-22; 4:18-44; 5:1-14). [25]ಅವರನ್ನು ಎಳೆಯಲು ಯತ್ನಿಸಿದನು. [26]ಆ ಮನುಷ್ಯನು ಹತ್ತಿರದಲ್ಲಿದ್ದನು. ಅವನು ತಂದೆತಾಯಿಗಳ ವಿವಾದವನ್ನು ಆಲಿಸಿರಬಹುದು. [27]ನೋಡಿ ಯೋಹಾನ ಯೋಬ 12:42; 16:2ರ ಹೊರಗೆ ಹಾಕಿದ ಕುರಿತು ನೋಡಿರಿ. [28]ಯೆಹೂದ್ಯರಿಂದ ಪ್ರತ್ಯೇಕ ಮಾಡಿದ ಕುರಿತು ಅರಣ್ಯಕಾಂಡ 15:30; ಮತ್ತು ಲೂಕ 6:22 ನೋಡಿರಿ. [29]ಅವನು 13 ಪ್ರಾಯದವನಾಗಿರಬಹುದು. ಅಂದರೆ ಮೂವತ್ತು ವಯಸ್ಸಿನಿಗಿಂತ ಅಧಿಕ ಮನುಷ್ಯನು ಬೆಳೆದಿರುವನು ಎಂಬ ಕುರುಹು. [30]ಅವನು ಈಗಾಗಲೇ ಆತನ ಶಿಷ್ಯನಾಗಿರಬಹುದು.

[31]ಗ್ರೀಕ್ ಸಂಪ್ರದಾಯದಂತೆ, ನಕರಾತ್ಮಕ ಅಥವಾ ಸಕಾರಾತ್ಮಕ ಉತ್ತರವನ್ನು ಪಡೆದಿರಬಹುದಾದ

ಪ್ರಶ್ನೆ. [32]ಯೋಹಾನ 9:31 ಎಚ್ಚರವಹಿಸಿ ಬಳಸಿರಿ. ಹಿಂದಿನ ಪಾಠ ನೋಡಿರಿ. [33]ಸ್ವಸ್ಥತೆ ಮಾಡುವದು ಮೆಸ್ಸೀಯನ ಪದ್ಧತಿಯಾಗಿತ್ತು (ನೋಡಿ ಯೆಶಾಯ 29:18; 35:5; 42:7; ಮತ್ತಾಯ 11:2-6). ಇತರೆ ವಿಚಾರಗಳಿಗಿಂತ, ಕುರುಡನ ಸ್ವಸ್ಥತೆಯನ್ನು ಹೆಚ್ಚಾಗಿ ಗಮನಿಸಲಾಗಿದೆ (ಮತ್ತಾಯ 9:27-31; 12:22; 20:29-34). [34]ವಂಶಪಾರಂಪರ್ಯವಾಗಿರದೆ, ಹುಟ್ಟಿನಿಂದಲೇ ಆದದ್ದು. [35]ಯೇಸುವಿನ ಪ್ರಾರ್ಥನೆ ಹಾಗೂ ಮನವಿಯನ್ನು ದೇವರು ಆಲಿಸಿದನು ಎಂಬುದಕ್ಕೆ ಈ ಸ್ವಸ್ಥತೆಯು ಪುರಾವೆಯಾಗಿದೆ. [36](ಯೋಹಾನ 9:3) ಈ ಅಂಶವನ್ನು ಯೇಸು ನಿರಾಕರಿಸಿದನು, ಮಕ್ಕಳು ಶುದ್ಧರಾಗಿ ಹುಟ್ಟುವರು ಎಂದು ಸತ್ಯವೇದ ತಿಳಿಸುತ್ತದೆ (ಮತ್ತಾಯ 18:3; 19:14). ಕ್ಯಾಲ್ವಿನರು ಫರಿಸಾಯರ ಎಲ್ಲರಿಗೂ ತಿಳಿಯಿತು. [37]ಸಂಬಂಧ ಕಳಕೊಳ್ಳಿರಿ. ಯೋಹಾನ 9:35, ಅವನನ್ನು ಹೊರಗೆ ಹಾಕಿದ ಸಂಗತಿಯು ಎಲ್ಲರಿಗೂ ತಿಳಿಯಿತು. [38]ಅವನು ಆ ದಿವಸ ಹೊರಹಾಕಲ್ಪಟ್ಟನು. [39]ಅವನ ತಂದೆತಾಯಿಗಳಾಗಲೇ, ಅಥವಾ ನೆರೆಹೊರೆಯವರಾಗಲೂ ಆತನ ಹಿಂದೆ ನಿಲ್ಲಲಿಲ್ಲ. [40]"ದೇವರ ಮಗನ" ಬದಲು "ಮನುಷ್ಯ ಕುಮಾರ" ಎಂಬುದು ಉತ್ತಮ ಹೇಳಿಕೆ (ದಾನಿಯೇಲ 17:13) ಪ್ರಕಾರ ಅದು ಮೆಸ್ಸೀಯನ ಕುರಿತ ಹೇಳಿಕೆ.

[41]ವ್ಯಾಕರಣದ ವ್ಯತ್ಯಾಸವಿದೆ. [42]"ಸ್ವಾಮಿ" ಎಂಬುದು ಗೌರವದ ಪದ, ಆತನ ದೈವತ್ವದ ಒಪ್ಪುವಿಕೆಯಲ್ಲ. ವಚನ 38ರಲ್ಲಿ ಒಪ್ಪಿದ್ದಾನೆ. [43]William Barclay, *The Gospel of John*, rev. ed., vol. 2, The Daily Study Bible Series (Philadelphia: Westminster Press, 1975), 52. [44]ಯೇಸು ತನ್ನ ದೈವತ್ವವನ್ನು ನಿರಾಕರಿಸಲಿಲ್ಲ ಎಂಬುದಕ್ಕೆ ಆರಾಧನೆಯು ಪುರಾವೆಯಾಗಿದೆ (ಮತ್ತಾಯ 4:10). [45]ಪರಲೋಕದಲ್ಲಿದ್ದು ನ್ಯಾಯ ತೀರಿಸಬಹುದಿತ್ತು ಆದರೆ ಆತನು ರಕ್ಷಕನಾಗಿ ಬಂದನು. [46]ಪಶ್ಚಾತ್ತಾಪ ಪಟ್ಟವನು ದೀಕ್ಷಾಸ್ನಾನ ಹೊಂದಲಿ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38). ಪುನಸೇರಲು ಪ್ರಾರ್ಥಿಸಲಿ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16). [47]This illustration is from Rick Atchley, "A Pilgrim's Progress," sermon preached at the Southern Hills church of Christ, Abilene, Texas, 14 November 1982. [48]ಜಾನ್ ನ್ಯೂಟನ್ "ಅಮೇಜಿಂಗ್ ಗ್ರೇಸ್." John Newton, "Amazing Grace," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1994). (Emphasis mine.)